ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ ಇಲ್ಲಿ

ದಿನಾಂಕ: 17.12.2021 ರಂದು ನಡೆದ ಹೊಸಕೋಟೆ ಯೋಜನಾ ಪ್ರಾಧಿಕಾರದ 89 ನೇ ಸಾಮಾನ್ಯ ಸಭೆಯ ನಡವಳಿಗಳು.

<u>ಹಾಜರಿದ್ದ ಸದಸ್ಯರು:</u>

ಕ್ರಮ ಸಂಖ್ಯೆ	ಹೆಸರು ಮತ್ತು ಪದನಾಮ	
1.	ಶ್ರೀ ಸಿ. ನಾಗರಾಜ್, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.	ಅಧ್ಯಕ್ಷರು
2.	ಶ್ರೀ ಎಂ. ಮಹದೇವ ಪ್ರಸಾದ್, ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.	ಸದಸ್ಯ ಕಾರ್ಯದರ್ಶಿ
3	ಶ್ರೀ ಎಸ್. ಅರುಣ್ ಕುಮಾರ್ (ಹರಿ), ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.	ಸದಸ್ಯರು
4.	ಶ್ರೀ ಎಸ್. ಕೆ. ಸಂತೋಷ್ ಕುಮಾರ್, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.	ಸದಸ್ಯರು
5.	ಶ್ರೀ ಎನ್. ವಿಶ್ವನಾಥ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.	ಸದಸ್ಯರು

ಗೈರು ಹಾಜರಾದವರು:

1.	ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಉಪವಿಭಾಗ, ದೊಡ್ಡಬಳ್ಳಾಪುರ.	ಸದಸ್ಯರು
2.	ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಬೆಂಗಳೂರು.	ಸದಸ್ಯರು
3.	ಪೌರಾಯುಕ್ತರು, ಹೊಸಕೋಟೆ ನಗರಸಭೆ, ಹೊಸಕೋಟೆ,	ಸದಸ್ಯರು

C. Nagaraj

ಸದಸ್ಯ ಕಾರ್ಯದರ್ಶಿಯವರು ಸಭೆಯ ಪ್ರಾರಂಭದಲ್ಲಿ ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಹಾರ್ದಿಕವಾಗಿ ಸ್ವಾಗತಿಸಿದರು.

ವಿಷಯ :1 ದಿನಾಂಕ: 24.09.2021 ರಂದು ನಡೆದ ಪ್ರಾಧಿಕಾರದ 88ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು.

ನಿರ್ಣಯ: ದಿನಾಂಕ: 24.09.2021 ರಂದು ನಡೆದ ಪ್ರಾಧಿಕಾರದ 88ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಲಾಯಿತು.

ವಿಷಯ 2: ದಿನಾಂಕ: 24.09.2021 ರಂದು ನಡೆದ ಪ್ರಾಧಿಕಾರದ 88ನೇ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ವಿವರವನ್ನು **ಅನುಬಂಧ–1** ರಲ್ಲಿ ಲಗತ್ತಿಸಿದ್ದು, ಸಭೆಯ ಅನುಮೋದನೆಗೆ ಮಂಡಿಸಿದೆ.

ನಿರ್ಣಯ: ದಿನಾಂಕ: 24.09.2021 ರಂದು ನಡೆದ ಪ್ರಾಧಿಕಾರದ 88ನೇ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮವನ್ನು ಪರಿಶೀಲಿಸಿ ದೃಢೀಕರಿಸಲಾಯಿತು.

ಸಾಮಾನ್ಯ ವಿಷಯಗಳು

ವಿಷಯ: 3 ಹೊಸಕೋಟೆ ಯೋಜನಾ ಪ್ರಾಧಿಕಾರದ ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್–2021 ರ ಮಾಹೆಗಳ ಆದಾಯ ಮತ್ತು ವೆಚ್ಚವನ್ನು **ಅನುಬಂಧ–2, 3 ಮತ್ತು 4** ರಲ್ಲಿ ಲಗತ್ತಿಸಿದ್ದು, ಸಭೆಯ ಅನುಮೋದನೆಗೆ ಮಂಡಿಸಿ ದೃಢೀಕರಿಸುವ ಕುರಿತು.

ಟಿಪ್ಪಣಿ: ಹೊಸಕೋಟೆ ಯೋಜನಾ ಪ್ರಾಧಿಕಾರದ ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್–2021 ರ ಮಾಹೆಗಳ ಆದಾಯ ಮತ್ತು ವೆಚ್ಚವನ್ನು **(ಅನುಬಂಧ–2, 3 ಮತ್ತು 4)** ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಲಾಗಿದೆ.

ನಿರ್ಣಯ: ಹೊಸಕೋಟೆ ಯೋಜನಾ ಪ್ರಾಧಿಕಾರದ ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್–2021 ರ ಮಾಹೆಗಳ ಆದಾಯ ಮತ್ತು ವೆಚ್ಚವನ್ನು ಪರಿಶೀಲಿಸಿ ಅಂಗೀಕರಿಸಲಾಯಿತು.

ವಿಷಯ: 4 **ಹೊಸಕೋಟೆ ಯೋಜನಾ ಪ್ರಾಧಿಕಾರಕ್ಕೆ ಮಂಜೂರಾಗಿರುವ ಹುದ್ದೆಗಳನ್ನು ಸವೀಕರಿಸಿಕೊಳ್ಳುವ ಬಗ್ಗೆ.**

ಟಿಪ್ಪಣಿ:

1. ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಡಿ ರಚಿತವಾಗಿ, 2006 ನೇ ಸಾಲಿನಿಂದಲೂ ಕಾರ್ಯ ನಿರ್ವಹಿಸುತ್ತಿರುತ್ತದೆ. ಈ ಪ್ರಾಧಿಕಾರದಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 203 ಬಿಎಂಆರ್ 2009, ದಿನಾಂಕ: 10.08.2009 ಮತ್ತು ನಅಇ 57 ಬಿಎಂಆರ್ 2010, ದಿನಾಂಕ: 06.10.2010 ರಂತೆ ಕೆಲವೊಂದು ಹುದ್ದೆಗಳು ಮಂಜೂರಾಗಿದ್ದು, ಅದರಂತೆ ಪ್ರಾಧಿಕಾರದಲ್ಲಿ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ.

2. ಹೊಸಕೋಟೆ ಯೋಜನಾ ಪ್ರಾಧಿಕಾರದಲ್ಲಿ ದಿನೇ ದಿನೇ ಕಾರ್ಯ ಒತ್ತಡ ಹೆಚ್ಚುತ್ತಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 176 ಬಿಎಂಆರ್ 2020, ಬೆಂಗಳೂರು, ದಿನಾಂಕ: 17.11.2020 ರ ಆದೇಶದಲ್ಲಿ ಈ ಕೆಳಕಂಡ ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಕೆಲವೊಂದು ನಿಬಂಧನೆಗಳಿಗೊಳಪಟ್ಟು ತಾತ್ಕಾಲಿಕವಾಗಿ ಮುಂದುವರೆಸಲು ಮಂಜೂರಾತಿ ನೀಡಲಾಗಿರುತ್ತದೆ.

ಕ್ರಸಂ	ಹುದ್ದೆಗಳ ಹೆಸರು	ಹುದ್ದೆಗಳ ಸಂಖ್ಯೆ	ಹುದ್ದೆಗಳನ್ನು ಮುಂದುವರೆಸಿ ಆದೇಶಿಸಿರುವ ಅವಧಿ
1.	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	01	05.10.2019 ರಿಂದ 04.10.2021
2.	ನಗರ ಯೋಜಕರು	01	
3.	ಸಹಾಯಕ ನಗರ ಯೋಜಕರು	01	
4.	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	01	10.08.2019 ರಿಂದ 09.08.2021
5.	ಸಹಾಯಕ ನಗರ ಯೋಜಕರು	01	

3. ಆದರೆ, ಪ್ರಾಧಿಕಾರದಲ್ಲಿ ಹೆಚ್ಚುತ್ತಿರುವ ದೈನಂದಿನ ಕೆಲಸ ಕಾರ್ಯಗಳನ್ನು ಸುಲಲಿತವಾಗಿ ನಿರ್ವಹಿಸುವ ಸಂಬಂಧ ಈ ಮೇಲ್ಕಂಡ ಹುದ್ದೆಗಳನ್ನು ಮುಂದುವರೆಸುವ ಅವಶ್ಯಕತೆ ಇರುತ್ತದೆ. ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಉದ್ದೇಶಿತ ನಂದಗುಡಿ ಉಪನಗರ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 13(ಬಿ) ರಡಿಯಲ್ಲಿ ಮಹಾಯೋಜನೆಯನ್ನು ತಯಾರಿಸಬೇಕಾಗಿರುತ್ತದೆ. ಅಲ್ಲದೆ, ಪ್ರಾಧಿಕಾರವು ಆರ್ಥಿಕವಾಗಿ ಸದೃಢವಾಗಿರುವ ಹಿನ್ನೆಲೆ ಹಾಗೂ ಅಧಿಕಾರಿ/ನೌಕರರ ವೇತನವನ್ನು ಸರ್ಕಾರದ ಅನುದಾನವಿಲ್ಲದೇ ಸ್ವಂತವಾಗಿ ಭರಿಸುತ್ತಿರುವ ಪ್ರಯುಕ್ತ, ಸದರಿ ಹುದ್ದೆಗಳನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದಲೇ ನಿಯೋಜನೆ ಮೇಲೆ ಭರ್ತಿ ಮಾಡುವ ಪರತ್ತಿನೊಂದಿಗೆ ಮುಂದಿನ ಎರಡು ವರ್ಷಕ್ಕೆ ಸದರಿ ಹುದ್ದೆಗಳನ್ನು ಮುಂದುವರಿಸುವ ಬಗ್ಗೆ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮುಖಾಂತರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿರುತ್ತದೆ.

ಹಾಗಾಗಿ, ಮೇಲ್ಕಂಡ ಅಂಶಗಳನ್ವಯ ಸದರಿ ಹುದ್ದೆಗಳನ್ನು ಮುಂದಿನ ಎರಡು ವರ್ಷದ ಅವಧಿಗೆ ಮುಂದುವರೆಸುವ ಸಂಬಂಧ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯವನ್ನು ಮಂಡಿಸಿದೆ.

ನಿರ್ಣಯ: ವಿಷಯ ಟಿಪ್ಪಣಿಯಲ್ಲಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು. ಪ್ರಾಧಿಕಾರದಲ್ಲಿ ಅವಶ್ಯಕತೆ ಇರುವ ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವ ಹುದ್ದೆಗಳನ್ನು ಮುಂದಿನ ಎರಡು ವರ್ಷಕ್ಕೆ ಮುಂದುವರೆಸುವ ಬಗ್ಗೆ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಮುಖಾಂತರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಕ್ರ ಸಂ.	ಹುದ್ದೆಗಳ ಹೆಸರು	ಹುದ್ದೆಗಳ ಸಂಖ್ಯೆ	ಹುದ್ದೆಗಳನ್ನು ಮುಂದುವರೆಸಿ ಆದೇಶಿಸಿರುವ ಅವಧಿ	ಮುಂದಿನ ಎರಡು ವರ್ಷಕ್ಕೆ ಮುಂದುವರೆಸಲು ಕೋರಿರುವ ಅವಧಿ
1.	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	01	05.10.2019 ರಿಂದ 04.10.2021	05.10.2021 ರಿಂದ 04.10.2023
2.	ನಗರ ಯೋಜಕರು	01		
3.	ಸಹಾಯಕ ನಗರ ಯೋಜಕರು	01		
4.	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	01	10.08.2019 ರಿಂದ 09.08.2021	10.08.2021 ರಿಂದ 09.08.2023
5.	ಸಹಾಯಕ ನಗರ ಯೋಜಕರು	01		

C. Nagaraj

ವಿಷಯ: 5 ಜಿಲ್ಲಾಧಿಕಾರಿಗಳಿಗೆ ವಿವಿಧ ಉದ್ದೇಶಗಳಿಗೆ ವಿಶೇಷ ಸಂದರ್ಭಗಳಲ್ಲಿ ಭೂ ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡುವ ಬಗ್ಗೆ.

ಭೂ ಪರಿವರ್ತನೆಗೆ ಸಂಬಂಧಿಸಿದಂತೆ ವಿಶೇಷ ಸಂದರ್ಭಗಳಲ್ಲಿ ತಾಂತ್ರಿಕ ಅಭಿಪ್ರಾಯ ನೀಡಬೇಕಾದ ಪ್ರಸ್ತಾವನೆಗಳಿಗೆ ಪ್ರಾಧಿಕಾರದ ಅನುಮತಿ ಪಡೆದು ತಾಂತ್ರಿಕ ಅಭಿಪ್ರಾಯವನ್ನು ನೀಡಬೇಕಾಗಿರುತ್ತದೆ.

ಆದರೆ, ನಿಗದಿತ ಅವಧಿಯಲ್ಲಿ ತಾಂತ್ರಿಕ ಅಭಿಪ್ರಾಯ ಸಲ್ಲಿಸಬೇಕಾಗಿದ್ದ ಕಾರಣ ಈ ಕೆಳಕಂಡ ಪ್ರಸ್ತಾವನೆಗಳಿಗೆ ನಿಯಮಾನುಸಾರ ಸಾರ್ವಜನಿಕ ಪ್ರಕಟಣೆಗಳನ್ನು ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು, ನಿಗದಿತ ಅವಧಿಯಲ್ಲಿ ಯಾವುದೇ ಸಲಹೆ/ ಸೂಚನೆ/ ಆಕ್ಷೇಪಣೆಗಳನ್ನು ಈ ಕಛೇರಿಯಲ್ಲಿ ಸ್ವೀಕರಿಸಿರುವುದಿಲ್ಲ. ಹಾಗಾಗಿ, ಈ ಕೆಳಕಂಡ ಪ್ರಸ್ತಾವನೆಗಳಿಗೆ ಈಗಾಗಲೇ ತಾಂತ್ರಿಕ ಅಭಿಪ್ರಾಯ ನೀಡಲಾಗಿದ್ದು, ಸದರಿ ವಿಷಯವನ್ನು ಸಭೆಯ ಘಟನೋತ್ತರ ಮಂಜೂರಾತಿಗಾಗಿ ಮಂಡಿಸಿದೆ.

ವಿಷಯ: 5ಎ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಜಿನ್ನಾಗರ ಗ್ರಾಮದ ಸ.ನಂ. 39/5 ರಲ್ಲಿನ **04 ಗುಂಟೆ** ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಪ್ರಸ್ತಾವನೆಗೆ ಆನ್‌ಲೈನ್ ಮುಖಾಂತರ ತಾಂತ್ರಿಕ ಅಭಿಪ್ರಾಯ ನೀಡಿರುವ ಬಗ್ಗೆ.

ವಿಷಯ: 5ಬಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಜಿನ್ನಂಡಹಳ್ಳಿ ಗ್ರಾಮದ ಸ.ನಂ. 29/10 ರಲ್ಲಿನ **01 ಎಕರೆ 01 1/2 ಗುಂಟೆ** ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಲ್ಲಿನ ವೇರ್ ಹೌಸ್ ಉದ್ದೇಶಕ್ಕಾಗಿ ಭೂ ಪರಿವರ್ತನೆ ಪ್ರಸ್ತಾವನೆಗೆ ಆನ್‌ಲೈನ್ ಮುಖಾಂತರ ತಾಂತ್ರಿಕ ಅಭಿಪ್ರಾಯ ನೀಡಿರುವ ಬಗ್ಗೆ.

ವಿಷಯ: 5ಸಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಜಿನ್ನಂಡಹಳ್ಳಿ ಗ್ರಾಮದ ಸ.ನಂ. 29/11 ರಲ್ಲಿನ **01 ಎಕರೆ 0 3/4 ಗುಂಟೆ** ವಿಸ್ತೀರ್ಣದ ಜಮೀನನ್ನು ಜಮೀನನ್ನು ಕೃಷಿ ವಲಯದಲ್ಲಿನ ವೇರ್ ಹೌಸ್ ಉದ್ದೇಶಕ್ಕಾಗಿ ಭೂ ಪರಿವರ್ತನೆ ಪ್ರಸ್ತಾವನೆಗೆ ಆನ್‌ಲೈನ್ ಮುಖಾಂತರ ತಾಂತ್ರಿಕ ಅಭಿಪ್ರಾಯ ನೀಡಿರುವ ಬಗ್ಗೆ.

ವಿಷಯ: 5ಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ತಿಮ್ಮಂಡಹಳ್ಳಿ ಗ್ರಾಮದ ಸ.ನಂ. 2/6 ರಲ್ಲಿನ **20 ಗುಂಟೆ** ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಪ್ರಸ್ತಾವನೆಗೆ ಆನ್‌ಲೈನ್ ಮುಖಾಂತರ ತಾಂತ್ರಿಕ ಅಭಿಪ್ರಾಯ ನೀಡಿರುವ ಬಗ್ಗೆ.

ವಿಷಯ: 5ಇ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ತಿಮ್ಮಂಡಹಳ್ಳಿ ಗ್ರಾಮದ ಸ.ನಂ. 2/5 ರಲ್ಲಿನ **17 ಗುಂಟೆ** ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಪ್ರಸ್ತಾವನೆಗೆ ಆನ್‌ಲೈನ್ ಮುಖಾಂತರ ತಾಂತ್ರಿಕ ಅಭಿಪ್ರಾಯ ನೀಡಿರುವ ಬಗ್ಗೆ.

ನಿರ್ಣಯ: ಟಿಪ್ಪಣಿಯಲ್ಲಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು. ಕಂದಾಯ ಇಲಾಖೆಗೆ ಭೂ ಪರಿವರ್ತನೆಯ ಸಲುವಾಗಿ ತಾಂತ್ರಿಕ ಅಭಿಪ್ರಾಯ ನೀಡುವ ಸಂಬಂಧ ಪ್ರಾಧಿಕಾರದಲ್ಲಿ ಆನ್‌ಲೈನ್ ಮುಖಾಂತರ ಸ್ವೀಕೃತವಾದ ಪ್ರಸ್ತಾವನೆಗಳಿಗೆ ಪ್ರಾಧಿಕಾರದ ಸೂಚನಾ ಫಲಕದಲ್ಲಿ ಸಾರ್ವಜನಿಕರಿಂದ ಸಲಹೆ / ಸೂಚನೆ/ ಆಕ್ಷೇಪಣೆಗಳನ್ನು ಆಹ್ವಾನಿಸಿ 15 ದಿನಗಳ ಕಾಲಾವಕಾಶ ನೀಡಿ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.

ಆದರೆ, ಸದರಿ ಪ್ರಕಟಣೆಗಳಿಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ ಸೂಚನೆ/ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಈ ಕಛೇರಿಯಲ್ಲಿ ಸ್ವೀಕರಿಸಿರುವುದಿಲ್ಲ. ಹಾಗಾಗಿ, ನಿಯಮಾನುಸಾರ ತಾಂತ್ರಿಕ ಅಭಿಪ್ರಾಯವನ್ನು ನಿಗದಿತ ಅವಧಿಯಲ್ಲಿ ಕಂದಾಯ ಇಲಾಖೆಗೆ ಸಲ್ಲಿಸಲಾಗಿರುವುದನ್ನು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ಏಕ ನಿವೇಶನ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ

ವಿಷಯ: 6 ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಗುಳ್ಳಹಳ್ಳಿ ಗ್ರಾಮದ ಸ.ನಂ. 86/9 ರಲ್ಲಿನ 21 ಗುಂಟೆ ಮತ್ತು ಸ.ನಂ. 86/10 ರಲ್ಲಿನ 18 1/4 ಗುಂಟೆ **ಒಟ್ಟು 39 1/4 ಗುಂಟೆ** ವಿಸ್ತೀರ್ಣದ ಜಮೀನುಗಳಿಗೆ ಕೈಗಾರಿಕಾ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಬಗ್ಗೆ.
ಅರ್ಜಿದಾರರು:– ಶ್ರೀ ಸಿ. ಮುನಿಯಪ್ಪ ಬಿನ್ ಲೇಟ್ ಚಿನ್ನಪ್ಪ.

ಟಿಪ್ಪಣಿ:

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ **ಸಿ. ಮುನಿಯಪ್ಪ ಬಿನ್ ಲೇಟ್ ಚಿನ್ನಪ್ಪ** ರವರು ತಮ್ಮ ಪ್ರಸ್ತಾವನೆಯೊಂದಿಗೆ ದಾಖಲಾತಿಗಳು ಹಾಗೂ ಕರಡು ನಕ್ಷೆಯನ್ನು ಸಲ್ಲಿಸಿ, ಕೈಗಾರಿಕಾ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ.

2. ಪ್ರಸ್ತಾಪಿತ ಜಮೀನುಗಳು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆ ಯಾಗಿರುವ ಮಹಾಯೋಜನೆಯಂತೆ ಕೈಗಾರಿಕಾ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಅದರಂತೆ ಪ್ರಸ್ತಾಪಿತ ಜಮೀನನ್ನು ಜಿಲ್ಲಾಧಿಕಾರಿಗಳು ಕೈಗಾರಿಕಾ ಉದ್ದೇಶಕ್ಕೆ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 137847, ದಿನಾಂಕ: 12.12.2019 ರಲ್ಲಿ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ.

3. ಪ್ರಸ್ತಾಪಿತ ಜಮೀನನ್ನು ಸ್ಥಳ ಪರಿಶೀಲಿಸಲಾಗಿ, ಸದರಿ ಜಮೀನಿಗೆ ರಾಜ್ಯ ಹೆದ್ದಾರಿ ಸಂಖ್ಯೆ: 35 ರ ರಸ್ತೆಯಿಂದ ಗುಳ್ಳಹಳ್ಳಿ ಗ್ರಾಮಕ್ಕೆ ಹೋಗುವ 12 ಮೀ. ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನಿನ ಮಾಲೀಕತ್ವಕ್ಕೆ ಸಂಬಂಧಿಸಿದ ಕ್ರಯ ಪತ್ರ, ಭೂ ಪರಿವರ್ತನಾ ಆದೇಶದ ಅಧಿಕೃತ ಜ್ಞಾಪನ ಪತ್ರ, ಆರ್.ಟಿ.ಸಿ., ಮ್ಯುಟೇಷನ್, ಇ.ಸಿ., ಸರ್ವೆ ನಕ್ಷೆ, ಗ್ರಾಮ ನಕ್ಷೆ ಮತ್ತು ಏಕ ನಿವೇಶನ ವಿನ್ಯಾಸ ನಕ್ಷೆಯ ಕರಡು ಪ್ರತಿಯನ್ನು ಸಲ್ಲಿಸಿದ್ದು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸುವ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

4. ಅರ್ಜಿದಾರರು ಸಲ್ಲಿಸಿರುವ ಕರಡು ಕೈಗಾರಿಕಾ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯಂತೆ ಭೂ ಉಪಯೋಗ ವಿಶ್ಲೇಷಣೆಯು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಭೂ ಉಪಯೋಗ	ವಲಯ ನಿಯಮಾವಳಿಯಂತೆ ಕನಿಷ್ಠ ಶೇಕಡ	ಸಲ್ಲಿಸಿರುವ ನಕ್ಷೆ ಪ್ರಕಾರ	
			ಚ.ಮೀ. ಗಳಲ್ಲಿ	ಶೇಕಡ
1	ಕೈಗಾರಿಕಾ	–	3374.64	84.98
2.	ಉದ್ಯಾನವನ ಮತ್ತು ಬಯಲು ಜಾಗ	10	397.51	10.01
3.	ವಾಹನ ನಿಲುಗಡೆ ಜಾಗ	05	198.77	05.01
ಒಟ್ಟು			3970.92	100.00

4. ಮೇಲ್ಕಂಡ ಅಂಶಗಳನ್ವಯ, ನಿಗದಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು, **ಅರ್ಜಿದಾರರು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸುವ ನಿಬಂಧನೆಗೊಳಪಟ್ಟು,** ಸಲ್ಲಿಸಿರುವ ಕೈಗಾರಿಕಾ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗೆ ಅನುಗುಣವಾಗಿರುವ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ, ಅವಶ್ಯಕತೆ ಕಂಡುಬಂದಲ್ಲಿ ಸೂಕ್ತವಾಗಿ ಮಾರ್ಪಡಿಸಿಕೊಂಡು, ಕೈಗಾರಿಕಾ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಪರಿಗಣಿಸಬಹುದಾಗಿರುತ್ತದೆ. ಹಾಗಾಗಿ, ಪ್ರಸ್ತಾಪಿತ ಕೈಗಾರಿಕಾ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ವಿಷಯವನ್ನು ಸಭೆಯ ತೀರ್ಮಾನಕ್ಕಾಗಿ ಮಂಡಿಸಿದೆ.

ನಿರ್ಣಯ: ವಿಷಯ ಟಿಪ್ಪಣಿಯಲ್ಲಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು. **ಅರ್ಜಿದಾರರು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಿದ ನಂತರ** ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಗುಳ್ಳಹಳ್ಳಿ ಗ್ರಾಮದ ಸ.ನಂ. 86/9 ರಲ್ಲಿನ 21 ಗುಂಟೆ ಮತ್ತು ಸ.ನಂ. 86/10 ರಲ್ಲಿನ 18 1/4 ಗುಂಟೆ **ಒಟ್ಟು 39 1/4 ಗುಂಟೆ** ವಿಸ್ತೀರ್ಣದ ಜಮೀನುಗಳಿಗೆ ನಿಯಮಾನುಸಾರ ಶುಲ್ಕ ಪಾವತಿಸಿಕೊಂಡು ನಕ್ಷೆಯಲ್ಲಿ ಅವಶ್ಯವಿರುವ ಬದಲಾವಣೆಗಳನ್ನು ಅಳವಡಿಸಿಕೊಂಡು ಕೈಗಾರಿಕಾ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ: 7 ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಬೊಮ್ಮೇನಹಳ್ಳಿ ಗ್ರಾಮದ ಸ.ನಂ. 120/4 ರಲ್ಲಿನ **27 ಗುಂಟೆ** ವಿಸ್ತೀರ್ಣದ ಜಮೀನಿಗೆ ವಸತಿ ಉದ್ದೇಶದ ಏಕ ನಿವೇಶನ ನಕ್ಷೆ ಅನುಮೋದನೆ ಕೋರಿರುವ ಬಗ್ಗೆ.

ಅರ್ಜಿದಾರರು:– ಶ್ರೀ ವಿಜಯಕುಮಾರ್ ರೆಡ್ಡಿ ದೊಡ್ಡವಾಲ ಬಿನ್ ದೊಡ್ಡವಾಲ ಸಂಜೀವರೆಡ್ಡಿ.

ಟಿಪ್ಪಣಿ:

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ **ಶ್ರೀ ವಿಜಯಕುಮಾರ್ ರೆಡ್ಡಿ ದೊಡ್ಡವಾಲ ಬಿನ್ ದೊಡ್ಡವಾಲ ಸಂಜೀವರೆಡ್ಡಿ** ರವರು ತಮ್ಮ ಪ್ರಸ್ತಾವನೆಯೊಂದಿಗೆ ದಾಖಲಾತಿಗಳು ಹಾಗೂ ಕರಡು ನಕ್ಷೆಯನ್ನು ಸಲ್ಲಿಸಿ, ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ. ಪ್ರಸ್ತಾಪಿತ ಜಮೀನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಂತೆ ವಸತಿ ವಲಯ ಹಾಗೂ ಕಾಲಿ ರಸ್ತೆಯನ್ನು 30 ಮೀ. ಅಗಲಕ್ಕೆ ಅಗಲೀಕರಿಸಲು ಕಾಯ್ದಿರಿಸಲಾಗಿದ್ದು, ಅದರಂತೆ, ಪ್ರಸ್ತಾಪಿತ ಜಮೀನನ್ನು ಜಿಲ್ಲಾಧಿಕಾರಿಗಳು ವಸತಿ ಉದ್ದೇಶಕ್ಕೆ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎ.ಎಲ್.ಎನ್ (ಇ.ಬಿ.ಇ) ಎಸ್.ಆರ್.26/21–22 (ಅರ್ಜಿ ಸಂಖ್ಯೆ: 240712), ದಿನಾಂಕ: 18.09.2021 ರಲ್ಲಿ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ.

2. ಪ್ರಸ್ತಾಪಿತ ಜಮೀನನ್ನು ಸ್ಥಳ ಪರಿಶೀಲಿಸಲಾಗಿ, ಸದರಿ ಜಮೀನಿಗೆ ಬೂದಿಗೆರೆ ರಸ್ತೆಯಿಂದ ಬೊಮ್ಮೇನಹಳ್ಳಿಗೆ ಹೋಗುವ 15 ಮೀ. ಅಗಲದ ಗ್ರಾಮ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನಿನ ಮಾಲೀಕತ್ವಕ್ಕೆ ಸಂಬಂಧಿಸಿದ ಜಮೀನು ಕ್ರಯ ಪತ್ರದ ಪ್ರತಿ, ಭೂ ಪರಿವರ್ತನಾ ಆದೇಶದ ಅಧಿಕೃತ ಜ್ಞಾಪನ ಪತ್ರ, ಆರ್.ಟಿ.ಸಿ., ಮ್ಯುಟೇಷನ್, ಇ.ಸಿ., ಸರ್ವೆ ನಕ್ಷೆ, ಗ್ರಾಮ ನಕ್ಷೆ ಮತ್ತು ಏಕ ನಿವೇಶನ ವಿನ್ಯಾಸ ನಕ್ಷೆಯ ಕರಡು ಪ್ರತಿಯನ್ನು ಸಲ್ಲಿಸಿರುತ್ತಾರೆ.

C. Nagaraj

3. ಅರ್ಜಿದಾರರು ಸಲ್ಲಿಸಿರುವ ಕರಡು ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯಂತೆ ಭೂ ಉಪಯೋಗ ವಿಶ್ಲೇಷಣೆಯು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಭೂ ಉಪಯೋಗ	ಸಲ್ಲಿಸಿರುವ ನಕ್ಷೆ ಪ್ರಕಾರ	
		ಚ.ಮೀ. ಗಳಲ್ಲಿ	ಶೇಕಡ
1	ವಸತಿ	2529.09	92.59
2.	ರಸ್ತೆ ಅಗಲೀಕರಣಕ್ಕಾಗಿ	202.50	7.41
ಒಟ್ಟು		2731.59	100.00

4. ಮೇಲ್ಕಂಡ ಅಂಶಗಳನ್ವಯ, ನಿಗದಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು, ಅರ್ಜಿದಾರರು ಸಲ್ಲಿಸಿರುವ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗೆ ಅನುಗುಣವಾಗಿರುವ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ, ಅವಶ್ಯಕತೆ ಕಂಡುಬಂದಲ್ಲಿ ಸೂಕ್ತವಾಗಿ ಮಾರ್ಪಡಿಸಿಕೊಂಡು, ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಪರಿಗಣಿಸಬಹುದಾಗಿರುತ್ತದೆ. ಹಾಗಾಗಿ, ಪ್ರಸ್ತಾಪಿತ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ವಿಷಯವನ್ನು ಸಭೆಯ ತೀರ್ಮಾನಕ್ಕಾಗಿ ಮಂಡಿಸಿದೆ.

ನಿರ್ಣಯ: ವಿಷಯ ಟಿಪ್ಪಣಿಯಲ್ಲಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು. ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಬೊಮ್ಮೇನಹಳ್ಳಿ ಗ್ರಾಮದ ಸ.ನಂ. 120/4 ರಲ್ಲಿನ **27 ಗುಂಟೆ** ವಿಸ್ತೀರ್ಣದ ಜಮೀನಿಗೆ ನಿಯಮಾನುಸಾರ ಶುಲ್ಕ ಪಾವತಿಸಿಕೊಂಡು ನಕ್ಷೆಯಲ್ಲಿ ಅವಶ್ಯವಿರುವ ಬದಲಾವಣೆಗಳನ್ನು ಅಳವಡಿಸಿ ಕೊಂಡು ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ

ವಿಷಯ: 8 ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, **ಬೆಳ್ಳಿಕೆರೆ** ಗ್ರಾಮದ ಸ.ನಂ. 140/3 ಮತ್ತು ಇತರೆ ಸ. ನಂ. ಗಳಲ್ಲಿನ **ಒಟ್ಟು 62 ಎಕರೆ 20 ಗುಂಟೆ** (03 ಎಕರೆ 04 ಗುಂಟೆ 'ಎ' ಮತ್ತು 'ಬಿ' ಖರಾಬು ಒಳಗೊಂಡಂತೆ) ವಿಸ್ತೀರ್ಣದ ಜಮೀನುಗಳಿಗೆ ಕರ್ನಾಟಕ ಗೃಹ ಮಂಡಳಿ ವತಿಯಿಂದ ಹಮ್ಮಿಕೊಂಡಿರುವ ವಸತಿ ಯೋಜನೆಯ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ.

ಅರ್ಜಿದಾರರು: ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

ಟಿಪ್ಪಣಿ:

1. ವಿಷಯಕ್ಕೆ ಸಂಬಂಧಿಸಿದಂತೆ, **ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು** ರವರ ಕಛೇರಿ ಪತ್ರ ದಿನಾಂಕ: 02.08.2021 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಬೆಳ್ಳಿಕೆರೆ ಗ್ರಾಮಕ್ಕೆ ಸೇರಿದ 140/3 ಮತ್ತು ಇತರೆ ಸ. ನಂ. ಗಳಲ್ಲಿನ **ಒಟ್ಟು 62 ಎಕರೆ 20 ಗುಂಟೆ** (03 ಎಕರೆ 04 ಗುಂಟೆ 'ಎ' ಮತ್ತು 'ಬಿ' ಖರಾಬು ಒಳಗೊಂಡಂತೆ) ವಿಸ್ತೀರ್ಣದ ಜಮೀನುಗಳನ್ನು ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಡಿಸದೇ ಭೂಮಾಲೀಕರಿಂದ ನೇರವಾಗಿ 50:50 ರ ಅನುಪಾತದ ಪಾಲುದಾರಿಕೆಯಲ್ಲಿ ಕರ್ನಾಟಕ ಗೃಹ ಮಂಡಳಿ ಕಾಯ್ದೆಯ ಕಲಂ 33(2) ರ ಅಡಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ನೇರವಾಗಿ ಸದರಿ ಅನುಪಾತ ದನ್ವಯ ವಿನ್ಯಾಸವನ್ನು ಅಭಿವೃದ್ಧಿಪಡಿಸಲು

ಸರ್ಕಾರದ ಆದೇಶ ಸಂಖ್ಯೆ: ವ.ಇ. 2007 ಕ.ಗೃ.ಮಂ. 2018, ಬೆಂಗಳೂರು, ದಿನಾಂಕ: 08.11.2019 ರಲ್ಲಿ ಸರ್ಕಾರದ ಅನುಮೋದನೆ ದೊರೆತಿದ್ದು, ಭೂ ಮಾಲೀಕರುಗಳಿಂದ ವಸತಿ ಯೋಜನೆಗೆ ಸಂಬಂಧಿಸಿದ ಜಮೀನುಗಳನ್ನು ಅಭಿವೃದ್ಧಿ ಪಡಿಸಲು ಒಪ್ಪಿಗೆ ಪತ್ರವನ್ನು ಕನ್ವೇಯನ್ಸ್ ಡೀಡ್ ನ ಮೂಲಕ ಪಡೆದುಕೊಂಡಿರುವುದಾಗಿ **ಕಾರ್ಯಪಾಲಕ ಅಭಿಯಂತರರು,** ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರು ಸಂಬಂಧಪಟ್ಟ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾಪಿತ ವಿನ್ಯಾಸ ನಕ್ಷೆಯ ಪ್ರತಿಯನ್ನು ಅನುಮೋದನೆಗಾಗಿ ಕೋರಿ ಸಲ್ಲಿಸಿರುತ್ತಾರೆ. ಅಗತ್ಯ ಶುಲ್ಕಗಳನ್ನು ಕೆ.ಟಿ.ಸಿ.ಪಿ. ಕಾಯ್ದೆ, 1961 ರ ಕಲಂ 18 ಮತ್ತು 37 ರನ್ವಯ ಪಾವತಿಸಲಾಗುವುದೆಂದು ತಿಳಿಸಿ ಸದರಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ.

2. ಪ್ರಸ್ತಾಪಿತ ಜಮೀನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಂತೆ ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಕೆ.ಹೆಚ್.ಬಿ. ಕಾಯ್ದೆ, 1963 ರ ಕಾಯ್ದೆ 10 ರ ಕಲಂ 27 ರಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ಪ್ರಸ್ತಾಪಿತ ಗ್ರಾಮ ನಕ್ಷೆಯಲ್ಲಿರುವಂತೆ ಪ್ರಸ್ತಾಪಿತ ವಿನ್ಯಾಸದ ಪ್ರದೇಶದಲ್ಲಿ ಹಾದುಹೋಗಿರುವ ಬಂಡೀಜಾಡು, ಕಾಲುದಾರಿ ಪಥಗಳನ್ನು ಪ್ರಸ್ತಾಪಿತ ವಿನ್ಯಾಸದಲ್ಲಿ ಪ್ರಸ್ತಾಪಿಸಲಾಗಿರುವ ರಸ್ತೆ ಪರಿಚಲನಾ ಜಾಲಕ್ಕೆ ಸರಿಹೊಂದುವಂತೆ ಸೂಕ್ತವಾಗಿ ಬದಲಾವಣೆ ಮಾಡಿಕೊಳ್ಳಲು ಕಲ್ಪಿಸಿರುವ ಅವಕಾಶವನ್ನು ಸದರಿ ವಿನ್ಯಾಸದಲ್ಲಿ ಸೂಕ್ತವಾಗಿ ಅಳವಡಿಸಿಕೊಂಡು ಪ್ರಾಧಿಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ (ತಿದ್ದುಪಡಿ) ಕಲಂ 14–ಎ(3) & (4), ದಿನಾಂಕ: 20.10.2020 ರಲ್ಲಿ "ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ, ಯೋಜನಾ ಪ್ರಾಧಿಕಾರ, ಸ್ಥಳೀಯ ಪ್ರಾಧಿಕಾರ, ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಅಥವಾ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವುಗಳು ಯಾವುದೇ ಭೂಮಿಯನ್ನು ಪಡೆದಾಗಲೆಲ್ಲಾ ಅಂತಹ ಭೂಮಿಯ ಭೂ ಬಳಕೆಯ 12 ನೇ ಪ್ರಕರಣದ (1) ನೇ ಉಪಪ್ರಕರಣದ (ಬಿ), (ಸಿ) ಮತ್ತು (ಎಫ್) ಖಂಡಗಳ ಅಡಿಯಲ್ಲಿ ಮೀಸಲಿರಿಸಿದ ಭೂಮಿಗಳನ್ನು ಹೊರತುಪಡಿಸಿ ಅದನ್ನು ***"ಯಾವ ಉದ್ದೇಶಕ್ಕಾಗಿ ಪಡೆಯಲಾಗಿದೆಯೋ ಅದೇ ಉದ್ದೇಶಕ್ಕಾಗಿ ಭೂ ಬಳಕೆ ಮಾಡಬೇಕಿದೆ ಎಂದು ಭಾವಿಸತಕ್ಕದ್ದು"*** ಎಂದು ಉಲ್ಲೇಖಿಸಲಾಗಿದೆ.

3. ಹಾಗಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ (ತಿದ್ದುಪಡಿ) ಕಲಂ 14–ಎ(3) & (4), ದಿನಾಂಕ: 20.10.2020 ರನ್ವಯ ಪ್ರಸ್ತಾಪಿತ ಜಮೀನುಗಳನ್ನು ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ನಿಗದಿಪಡಿಸಲಾಗಿರುವ ಶುಲ್ಕವನ್ನು ಪಾವತಿಸಿಕೊಂಡು, ಭೂ ಉಪಯೋಗ ಬದಲಾವಣೆ ಆದೇಶವನ್ನು ಕಛೇರಿಯಿಂದ ಹೊರಡಿಸಿದ ನಂತರ ಪ್ರಸ್ತಾಪಿತ ಜಮೀನುಗಳನ್ನು ವಸತಿ ವಿನ್ಯಾಸ ನಕ್ಷೆ ಅನುಮೋದನೆಗೆ ಪರಿಗಣಿಸಬಹುದಾಗಿರುತ್ತದೆ.

4. ಪ್ರಸ್ತಾಪಿತ ಜಮೀನುಗಳನ್ನು ಸ್ಥಳ ಪರಿಶೀಲಿಸಲಾಗಿ, ಸದರಿ ಜಮೀನುಗಳಿಗೆ ಬೆಳ್ಳಿಕೆರೆಯಿಂದ ಮಾದಪ್ಪನಹಳ್ಳಿ ಗ್ರಾಮಕ್ಕೆ ಹೋಗುವ 12.00 ಮೀ. ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ. ಕರ್ನಾಟಕ ಗೃಹ ಮಂಡಳಿಯಿಂದ ಮಾಲೀಕತ್ವಕ್ಕೆ ಸಂಬಂಧಿಸಿದ ದಾಖಲೆಗಳಾದ ಕನ್ವೇಯನ್ಸ್ ಡೀಡ್‌ನ ಪ್ರತಿ, ಆರ್.ಟಿ.ಸಿ., ಮ್ಯುಟೇಷನ್, ಇ.ಸಿ., ಜಂಟಿ ಸರ್ವೆ ನಕ್ಷೆ, ಗ್ರಾಮ ನಕ್ಷೆ, ವಸತಿ ವಿನ್ಯಾಸ ನಕ್ಷೆಯ ಕರಡು ಪ್ರತಿಗಳನ್ನು ಸಲ್ಲಿಸಿದ್ದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು

ಸಲ್ಲಿಸಿರುವುದಿಲ್ಲ. ಆಗಾಗಿ, ಪ್ರಸ್ತಾಪಿತ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ಸಿ.ಎಫ್.ಇ ಪ್ರಮಾಣ ಪತ್ರವನ್ನು ಪಡೆದುಕೊಳ್ಳುವ ಷರತ್ತಿಗೊಳಪಟ್ಟು, ವಸತಿ ವಿನ್ಯಾಸ ನಕ್ಷೆ ಅನುಮೋದನೆಗೆ ಪರಿಗಣಿಸಬಹುದಾಗಿರುತ್ತದೆ. ಪ್ರಸ್ತಾಪಿತ ವಿನ್ಯಾಸದಲ್ಲಿನ ಜಮೀನುಗಳ ವಿಸ್ತೀರ್ಣಗಳ ವಿವರವು ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಸರ್ವೆ ನಂ.	ವಿಸ್ತೀರ್ಣ ಎ-ಗುಂ (ಎ ಮತ್ತು ಬಿ ಖರಾಬು ಸೇರಿ	ಎ ಖರಾಬು ಎ-ಗುಂ	ಬಿ ಖರಾಬು ಎ-ಗುಂ	ಎ ಮತ್ತು ಬಿ ಖರಾಬನ್ನು ಹೊರತುಪಡಿಸಿ ಎ-ಗುಂ
1	101	02-05	–	00-07	01-38
2	140/3	00-14 1/2	–	–	00-14 1/2
3	141	02-11	00-05	–	02-06
4	142	02-01		–	02-01
5	143	02-08	00-05	–	02-03
6	144/1	01-07	00-05	–	01-02
7	144/2	01-07	00-05	–	01-02
8	145	02-02	–	–	02-02
9	146	02-21	00-13	–	02-08
10	147	02-06	–	–	02-06
11	148	02-04	–	–	02-04
12	149	02-04	00-04	00-02	02-00
13	153	02-03	–	00-02	02-01
14	156	02-03	–	–	02-03
15	159/1	01-00	–	–	01-00
16	159/2	00-29	–	–	00-29
17	160/2	01-08	–	–	01-08
18	160/3	00-19	–	–	00-19
19	161	01-32	–	00-03	01-29
20	162	01-33	–	00-03	01-30
21	163/1	01-06	–	00-03	01-03
22	163/2	01-03	–	–	01-03
23	164	02-16	–	00-06	02-10
24	165	01-15	–	00-07	01-08
25	171/2	00-17 1/2	–	00-05	00-12 1/2
26	172/1	01-04	–	00-05	00-39
27	178/2	01-00	–	00-10	00-30
28	179/1	01-00	–	00-07	00-33
29	179/2	01-00	–	–	01-00
30	181	02-00	–	–	02-00
31	182	03-00	–	00-22	02-18
32	183	01-00	–	–	01-00
33	184	02-00	–	–	02-00
34	185/2	00-30	–	–	00-30
35	186	01-00	–	–	01-00
36	194	02-00	–	00-02	01-38
37	197	01-31	–	–	01-31
38	200	01-00	–	00-01	00-39

C. Nagaraj

39	201	02-00	–	00-01	01-39
40	203	01-00	–	–	01-00
41	204	01-00	–	00-03	00-37
ಒಟ್ಟು		**62-20**	**00-37**	**02-07**	**59-16**

5. ಕರ್ನಾಟಕ ಗೃಹ ಮಂಡಳಿಯವರು ಸಲ್ಲಿಸಿರುವ ಕರಡು ವಸತಿ ವಿನ್ಯಾಸ ನಕ್ಷೆಯಂತೆ ಭೂ ಉಪಯೋಗ ವಿಶ್ಲೇಷಣೆಯು (59 ಎಕರೆ 16 ಗುಂಟೆ ವಿಸ್ತೀರ್ಣಕ್ಕೆ 37 ಗುಂಟೆ 'ಎ' ಖರಾನ್ನು ಸೇರಿಸಿ ಒಟ್ಟಾರೆ 60 ಎಕರೆ 13 ಗುಂಟೆ ವಿಸ್ತೀರ್ಣಕ್ಕೆ) ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ.	ಭೂ ಉಪಯೋಗ	ವಲಯ ನಿಯಮಾವಳಿಯನ್ವಯ	ಸಲ್ಲಿಸಿರುವ ನಕ್ಷೆ ಪ್ರಕಾರ	
			ಚ.ಮೀ. ಗಳಲ್ಲಿ	ಶೇಕಡ
1	ವಸತಿ	ಗರಿಷ್ಠ ಶೇ 55	118424.16	48.51
2.	ವಾಣಿಜ್ಯ		7030.74	2.88
3.	ಉದ್ಯಾನವನ ಮತ್ತು ಬಯಲು ಜಾಗ	ಶೇ 10	26194.42	10.73
4.	ನಾಗರೀಕ ಸೌಲಭ್ಯ ನಿವೇಶನ	ಶೇ 5	12499.10	5.12
5.	ರಸ್ತೆಗಾಗಿ	–	79974.79	32.76
ಒಟ್ಟು			244123.21	100.00

6. ಮೇಲ್ಕಂಡ ಅಂಶಗಳನ್ವಯ ಅರ್ಜಿದಾರರು **ಅಗತ್ಯ ದಾಖಲಾತಿಗಳನ್ನು ಸಲ್ಲಿಸಿದ ನಂತರ,** ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗೆ ಅನುಗುಣವಾಗಿರುವ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿಕೊಂಡು, ಅವಶ್ಯಕತೆ ಕಂಡುಬಂದಲ್ಲಿ ನಕ್ಷೆಯನ್ನು ಸೂಕ್ತವಾಗಿ ಮಾರ್ಪಡಿಸಿಕೊಂಡು, ಕರ್ನಾಟಕ ಗೃಹ ಮಂಡಳಿಯಿಂದ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸಿದ ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10.09.2015 ರನ್ವಯ ವಸತಿ ವಿನ್ಯಾಸವನ್ನು ಅಭಿವೃದ್ಧಿಪಡಿಸುವ ಸಂಬಂಧ ನಿಯಮಾನುಸಾರ ಸದರಿ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡುವ ಬಗ್ಗೆ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಚರ್ಚೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ.

ನಿರ್ಣಯ: ವಿಷಯ ಟಿಪ್ಪಣಿಯಲ್ಲಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು. ಅರ್ಜಿದಾರರು **ಅಗತ್ಯ ದಾಖಲಾತಿಗಳನ್ನು ಸಲ್ಲಿಸಿದ ನಂತರ,** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ (ತಿದ್ದುಪಡಿ) ಕಲಂ 14-ಎ(3) & (4), ದಿನಾಂಕ: 20.10.2020 ರನ್ವಯ ಪ್ರಸ್ತಾಪಿತ ಜಮೀನುಗಳನ್ನು ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ನಿಗದಿಪಡಿಸಲಾಗಿರುವ ಶುಲ್ಕವನ್ನು ಪಾವತಿಸಿಕೊಂಡು, ಭೂ ಉಪಯೋಗ ಬದಲಾವಣೆ ಆದೇಶವನ್ನು ಈ ಕಛೇರಿಯಿಂದ ಹೊರಡಿಸಿದ ನಂತರ, ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ನಿಗದಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು ನಕ್ಷೆಯಲ್ಲಿ ಅವಶ್ಯವಿರುವ ಬದಲಾವಣೆಗಳನ್ನು ಅಳವಡಿಸಿಕೊಂಡು, ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10.09.2015 ರನ್ವಯ ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಬೆಳ್ಳಿಕೆರೆ ಗ್ರಾಮದ ಸ.ನಂ. 140/3 ಮತ್ತು ಇತರೆ ಸ. ನಂ. ಗಳಲ್ಲಿನ **ಒಟ್ಟು 62 ಎಕರೆ 20 ಗುಂಟೆ** (03 ಎಕರೆ 04 ಗುಂಟೆ 'ಎ' ಮತ್ತು 'ಬಿ' ಖರಾಬು ಒಳಗೊಂಡಂತೆ) ವಿಸ್ತೀರ್ಣದ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ: 9 ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಕಂಬಳೀಮರ ಗ್ರಾಮದ ಸ. ನಂ. 200 ರ **ಪೈಕಿ 01 ಎಕರೆ** ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ.
ಅರ್ಜಿದಾರರು:– ಶ್ರೀ ಹೆಚ್. ರಾಘವೇಂದ್ರ ಬಿನ್ ಲೇಟ್ ಪಿ. ಹನುಮಂತಪ್ಪ

ಟಿಪ್ಪಣಿ:

1. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ಮೇಲ್ಕಂಡ ಜಮೀನಿಗೆ ಸಂಬಂಧಿಸಿದಂತೆ ತಮ್ಮ ಪ್ರಸ್ತಾವನೆಯೊಂದಿಗೆ ದಾಖಲಾತಿಗಳು ಹಾಗೂ ಕರಡು ನಕ್ಷೆಯನ್ನು ಸಲ್ಲಿಸಿ, ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ. ಪ್ರಸ್ತಾಪಿತ ಜಮೀನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆಯಂತೆ ವಸತಿ ವಲಯ ಹಾಗೂ ಹಾಲಿ ರಸ್ತೆಯನ್ನು 18 ಮೀ. ಅಗಲಕ್ಕೆ ಅಗಲೀಕರಿಸಲು ಕಾಯ್ದಿರಿಸಲಾಗಿದ್ದು, ಅದರಂತೆ, ಪ್ರಸ್ತಾಪಿತ ಜಮೀನುಗಳನ್ನು ಜಿಲ್ಲಾಧಿಕಾರಿಗಳು ವಸತಿ ಉದ್ದೇಶಕ್ಕೆ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 190213, ದಿನಾಂಕ: 09.10.2020 ರಲ್ಲಿ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ.

2. ಪ್ರಸ್ತಾಪಿತ ಜಮೀನನ್ನು ಸ್ಥಳ ಪರಿಶೀಲಿಸಲಾಗಿ, ಸದರಿ ಜಮೀನಿಗೆ ಕುರುಬರಹಳ್ಳಿಯಿಂದ ಕಂಬಳೀಮರ ಗ್ರಾಮಕ್ಕೆ ಹೋಗುವ 09.00 ಮೀ. ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ. ಅರ್ಜಿದಾರರು ಮಾಲೀಕತ್ವಕ್ಕೆ ಸಂಬಂಧಿಸಿದ ದಾಖಲೆಗಳಾದ ಕ್ರಯ ಪತ್ರ, ಆರ್.ಟಿ.ಸಿ., ಮ್ಯುಟೇಷನ್, ಇ.ಸಿ., ಸರ್ವೆ ನಕ್ಷೆ, ಗ್ರಾಮ ನಕ್ಷೆ, ಭೂ ಪರಿವರ್ತನಾ ಆದೇಶದ ಅಧಿಕೃತ ಜ್ಞಾಪನ ಪತ್ರಗಳು, ವಸತಿ ವಿನ್ಯಾಸ ನಕ್ಷೆಯ ಕರಡು ಪ್ರತಿ ಹಾಗೂ ಪ್ರಸ್ತಾಪಿತ ವಿನ್ಯಾಸಕ್ಕೆ ನೀರನ್ನು ಸರಬರಾಜು ಮಾಡುವ ಬಗ್ಗೆ ಕಂಬಳೀಮರ ಗ್ರಾಮಪಂಚಾಯಿತಿಯಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಕರಡು ವಸತಿ ವಿನ್ಯಾಸ ನಕ್ಷೆಯಂತೆ ಭೂ ಉಪಯೋಗ ವಿಶ್ಲೇಷಣೆಯು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಭೂ ಉಪಯೋಗ	ವಲಯ ನಿಯಮಾವಳಿಯನ್ವಯ	ಸಲ್ಲಿಸಿರುವ ನಕ್ಷೆ ಪ್ರಕಾರ	
			ಚ.ಮೀ. ಗಳಲ್ಲಿ	ಶೇಕಡ
1	ವಸತಿ	ಗರಿಷ್ಠ ಶೇ 55	2223.50	54.94
2.	ಉದ್ಯಾನವನ ಮತ್ತು ಬಯಲು ಜಾಗ	ಕನಿಷ್ಠ ಶೇ 10	499.40	12.34
3.	ನಾಗರೀಕ ಸೌಲಭ್ಯ ನಿವೇಶನ	ಕನಿಷ್ಠ ಶೇ 5	202.35	5.00
4.	ರಸ್ತೆಗಾಗಿ	–	1121.55	27.72
ಒಟ್ಟು			4046.80	100.00

3. ಮೇಲ್ಕಂಡ ಅಂಶಗಳನ್ವಯ ಅರ್ಜಿದಾರರು ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗೆ ಅನುಗುಣವಾಗಿರುವ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ, ಅವಶ್ಯಕತೆ ಕಂಡುಬಂದಲ್ಲಿ ಸೂಕ್ತವಾಗಿ ಮಾರ್ಪಡಿಸಿಕೊಂಡು, ಅರ್ಜಿದಾರರು ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸಿದ ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10.09.2015 ರನ್ವಯ ವಸತಿ ವಿನ್ಯಾಸ ಅಭಿವೃದ್ಧಿಪಡಿಸಲು ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡುವ ಬಗ್ಗೆ ವಿಷಯವನ್ನು ಸಭೆಯ ತೀರ್ಮಾನಕ್ಕಾಗಿ ಮಂಡಿಸಿದೆ.

C. Nagaraj

ನಿರ್ಣಯ: ಟಿಪ್ಪಣಿಯಲ್ಲಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು. ನಿಗದಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು ನಕ್ಷೆಯಲ್ಲಿ ಅವಶ್ಯವಿರುವ ಬದಲಾವಣೆಗಳನ್ನು ಅಳವಡಿಸಿಕೊಂಡು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10.09.2015 ರನ್ವಯ ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಕಂಬಳೀಮರ ಗ್ರಾಮದ ಸ. ನಂ. 200 ರ ಪೈಕಿ **01 ಎಕರೆ** ವಿಸ್ತೀರ್ಣದ ಜಮೀನಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ: 10 ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಸೊಣ್ಣದೇನಹಳ್ಳಿ ಗ್ರಾಮದ ಸ. ನಂ. 58/2 ರಲ್ಲಿನ **29 ಗುಂಟೆ** (02 ಗುಂಟೆ ಬಿ ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ.

ಅರ್ಜಿದಾರರು:- ಶ್ರೀ ರಾಜಶೇಖರ್ ಟಿ.ಎನ್. ಬಿನ್ ಟಿ.ಡಿ. ನಾರಾಯಣಪ್ಪ

ಟಿಪ್ಪಣಿ:

1. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಮೇಲ್ಕಂಡ ಜಮೀನಿಗೆ ಸಂಬಂಧಿಸಿದಂತೆ ಅರ್ಜಿದಾರರಾದ **ಶ್ರೀ ರಾಜಶೇಖರ್ ಟಿ.ಎನ್. ಬಿನ್ ಟಿ.ಡಿ. ನಾರಾಯಣಪ್ಪ ರವರು** ತಮ್ಮ ಪ್ರಸ್ತಾವನೆಯೊಂದಿಗೆ ದಾಖಲಾತಿಗಳು ಹಾಗೂ ಕರಡು ನಕ್ಷೆಯನ್ನು ಸಲ್ಲಿಸಿ, ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ. ಪ್ರಸ್ತಾಪಿತ ಜಮೀನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆಯಂತೆ ಕೃಷಿ ವಲಯ ಹಾಗೂ ಸದರಿ ಜಮೀನಿಗೆ ಲಗತ್ತಾಗಿರುವ ಹಾಲಿ ರಸ್ತೆಯನ್ನು 18 ಮೀ. ಅಗಲಕ್ಕೆ ಅಗಲೀಕರಿಸಲು ಕಾಯ್ದಿರಿಸಲಾಗಿದೆ. ಆದರೆ, ಪ್ರಸ್ತಾಪಿತ ಜಮೀನು ಗ್ರಾಮಠಾಣಾ ವ್ಯಾಪ್ತಿಯಿಂದ 250 ಮೀ. ವ್ಯಾಪ್ತಿಯ ಒಳಭಾಗದಲ್ಲಿ ಬರುತ್ತಿದ್ದು, ಅನುಮೋದಿತ ಮಹಾಯೋಜನೆಯ ವಲಯ ನಿಯಮಾವಳಿಯಂತೆ ಗ್ರಾಮದ ಸ್ವಾಭಾವಿಕ ಬೆಳವಣಿಗೆಗೆ ಗಳಿಗಾಗಿ ವಸತಿ ಉದ್ದೇಶಕ್ಕೆ ಪರಿಗಣಿಸಲು ಅವಕಾಶ ಇರುತ್ತದೆ. **ಅನುಮೋದಿತ ಮಹಾಯೋಜನೆಯಂತೆ ಕೃಷಿ ವಲಯದಲ್ಲಿ ಕಾಯ್ದಿರಿಸಿರುವುದರಿಂದ ವಲಯ ನಿಯಮಾವಳಿಯಂತೆ ಕೃಷಿ ವಲಯದ ವಿಶೇಷ ಸಂದರ್ಭಗಳಲ್ಲಿ ವಸತಿ ಉದ್ದೇಶಕ್ಕಾಗಿ ಅನುಮತಿಸುವಾಗ ಕಟ್ಟಡದ ನೆಲ ವಿಸ್ತೀರ್ಣದ ಪರಿಮಾಣ (ಎಫ್.ಎ.ಆರ್) ವನ್ನು 01 ಕ್ಕೆ ಮತ್ತು ಕಟ್ಟಡವನ್ನು ನೆಲ+ಮೊದಲನೇ ಮಹಡಿಗೆ ಸೀಮಿತಗೊಳಿಸಿ ನಿರ್ಮಾಣ ಮಾಡುವ ಷರತ್ತಿಗೊಳಪಟ್ಟಿರುತ್ತದೆ.** ಅದರಂತೆ, ವಸತಿ ಉದ್ದೇಶಕ್ಕೆ ಕೆಲವು ನಿಬಂಧನೆಗೊಳಪಟ್ಟು ತಾಂತ್ರಿಕ ಅಭಿಪ್ರಾಯವನ್ನು ನೀಡಲಾಗಿದ್ದು, ಪ್ರಸ್ತಾಪಿತ ಜಮೀನನ್ನು ಜಿಲ್ಲಾಧಿಕಾರಿಗಳು ವಸತಿ ಉದ್ದೇಶಕ್ಕೆ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 242112, ದಿನಾಂಕ: 18.10.2021 ರಲ್ಲಿ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ.

2. ಪ್ರಸ್ತಾಪಿತ ಜಮೀನನ್ನು ಸ್ಥಳ ಪರಿಶೀಲಿಸಲಾಗಿ, ಸದರಿ ಜಮೀನಿಗೆ ರಾಜ್ಯ ಹೆದ್ದಾರಿ ಸಂ: 35 ರಿಂದ ಸೊಣ್ಣದೇನಹಳ್ಳಿ ಗ್ರಾಮಕ್ಕೆ ಹೋಗುವ 12 ಮೀ. ಅಗಲದ ಗ್ರಾಮ ರಸ್ತೆಯಿಂದ ಸಂಪರ್ಕವಿರುತ್ತದೆ. ಅರ್ಜಿದಾರರು ಮಾಲೀಕತ್ವಕ್ಕೆ ಸಂಬಂಧಿಸಿದ ದಾಖಲೆಗಳಾದ ಕ್ರಯ ಪತ್ರ, ಆರ್.ಟಿ.ಸಿ., ಮ್ಯುಟೇಷನ್, ಇ.ಸಿ., ಸರ್ವೆ ನಕ್ಷೆ, ಗ್ರಾಮ ನಕ್ಷೆ, ಭೂ ಪರಿವರ್ತನಾ ಆದೇಶದ ಅಧಿಕೃತ ಜ್ಞಾಪನ ಪತ್ರಗಳು, ವಸತಿ ವಿನ್ಯಾಸ ನಕ್ಷೆಯ ಕರಡು ಪ್ರತಿ ಹಾಗೂ ಪ್ರಸ್ತಾಪಿತ ವಿನ್ಯಾಸಕ್ಕೆ ನೀರನ್ನು ಸರಬರಾಜು ಮಾಡುವ ಬಗ್ಗೆ ದೊಡ್ಡತುಲ್ಲೂರು ಗ್ರಾಮಪಂಚಾಯಿತಿಯಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಕರಡು ವಸತಿ ವಿನ್ಯಾಸ ನಕ್ಷೆಯಂತೆ ಭೂ ಉಪಯೋಗ ವಿಶ್ಲೇಷಣೆಯು ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ.	ಭೂ ಉಪಯೋಗ	ವಲಯ ನಿಯಮಾವಳಿಯನ್ವಯ	ಸಲ್ಲಿಸಿರುವ ನಕ್ಷೆ ಪ್ರಕಾರ	
			ಚ.ಮೀ. ಗಳಲ್ಲಿ	ಶೇಕಡ
1	ವಸತಿ	ಗರಿಷ್ಠ ಶೇ 55	1528.36	52.06
2.	ಉದ್ಯಾನವನ ಮತ್ತು ಬಯಲು ಜಾಗ	ಕನಿಷ್ಠ ಶೇ 10	294.76	10.05
3.	ಸಾಗರೀಕ ಸೌಲಭ್ಯ ನಿವೇಶನ	ಕನಿಷ್ಠ ಶೇ 5	147.10	5.01
4.	ರಸ್ತೆಗಾಗಿ	–	963.71	32.85
ಒಟ್ಟು			2933.93	100.00

3. ಮೇಲ್ಕಂಡ ಅಂಶಗಳನ್ವಯ ಅರ್ಜಿದಾರರು ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗೆ ಅನುಗುಣವಾಗಿರುವ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ, ಅವಶ್ಯಕತೆ ಕಂಡುಬಂದಲ್ಲಿ ಸೂಕ್ತವಾಗಿ ಮಾರ್ಪಡಿಸಿಕೊಂಡು, ಅರ್ಜಿದಾರರು ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸಿದ ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10.09.2015 ರನ್ವಯ ವಸತಿ ವಿನ್ಯಾಸ ಅಭಿವೃದ್ಧಿಪಡಿಸಲು ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡುವ ಬಗ್ಗೆ ವಿಷಯವನ್ನು ಸಭೆಯ ತೀರ್ಮಾನಕ್ಕಾಗಿ ಮಂಡಿಸಿದೆ.

ನಿರ್ಣಯ:

ಟಿಪ್ಪಣಿಯಲ್ಲಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು. **ಅನುಮೋದಿತ ಮಹಾಯೋಜನೆಯಂತೆ ಪ್ರಸ್ತಾಪಿತ ಜಮೀನನ್ನು ಕೃಷಿ ವಲಯದಲ್ಲಿ ಕಾಯ್ದಿರಿಸಿರುವುದರಿಂದ ವಲಯ ನಿಯಮಾವಳಿಯಂತೆ ಕೃಷಿ ವಲಯದ ವಿಶೇಷ ಸಂದರ್ಭಗಳಲ್ಲಿ ವಸತಿ ಉದ್ದೇಶಕ್ಕಾಗಿ ಅನುಮತಿಸುವಾಗ ಕಟ್ಟಡದ ನೆಲ ವಿಸ್ತೀರ್ಣದ ಪರಿಮಾಣ (ಎಫ್.ಎ.ಆರ್) ವನ್ನು 01 ಕ್ಕೆ ಮತ್ತು ಕಟ್ಟಡವನ್ನು ನೆಲ+ಮೊದಲನೇ ಮಹಡಿಗೆ ಸೀಮಿತಗೊಳಿಸಿ ನಿರ್ಮಾಣ ಮಾಡುವ ಪರತ್ತಿಗೊಳಪಟ್ಟು,** ನಿಗದಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು ನಕ್ಷೆಯಲ್ಲಿ ಅವಶ್ಯವಿರುವ ಬದಲಾವಣೆಗಳನ್ನು ಅಳವಡಿಸಿಕೊಂಡು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10.09.2015 ರನ್ವಯ ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಸೊಣ್ಣದೇನಹಳ್ಳಿ ಗ್ರಾಮದ ಸ. ನಂ. 58/2 ರಲ್ಲಿನ 29 ಗುಂಟೆ (02 ಗುಂಟೆ ಬಿ ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ: 11

ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಅಲಪ್ಪನಹಳ್ಳಿ ಗ್ರಾಮದ ಸ. ನಂ. 1/6 ರಲ್ಲಿನ 01 ಗುಂಟೆ, ಸ.ನಂ. 1/12 ರಲ್ಲಿನ 05 1/2 ಗುಂಟೆ, ಸ.ನಂ. 1/13 ರಲ್ಲಿನ 05 1/2 ಗುಂಟೆ, ಸ.ನಂ. 96/1 ರಲ್ಲಿನ 01 ಎಕರೆ 11 1/2 ಗುಂಟೆ, ಸ.ನಂ. 100/2 ರಲ್ಲಿನ 08 ಗುಂಟೆ, ಸ.ನಂ. 101/1 ರಲ್ಲಿನ 09 ಗುಂಟೆ, ಸ.ನಂ. 101/2 ರಲ್ಲಿನ 05 ಗುಂಟೆ, ಸ.ನಂ. 102/2 ರಲ್ಲಿನ 02 ಗುಂಟೆ ಮತ್ತು ಶಂಕಣೀಮರ ಗ್ರಾಮದ ಸ.ನಂ. 25 ರಲ್ಲಿನ 09 ಗುಂಟೆ, ಸ.ನಂ. 26/4 ರಲ್ಲಿನ 37 1/2 ಗುಂಟೆ, ಸ.ನಂ. 26/12 ರಲ್ಲಿನ 01 1/2 ಗುಂಟೆ ಸ.ನಂ. 26/13 ರಲ್ಲಿನ 13 1/2 ಗುಂಟೆ, ಸ.ನಂ. 26/15 ರಲ್ಲಿನ 17 ಗುಂಟೆ, ಸ.ನಂ. 32/2 ರಲ್ಲಿನ 37 ಗುಂಟೆ, ಸ.ನಂ. 32/3 ರಲ್ಲಿನ 09 1/4 ಗುಂಟೆ, ಸ.ನಂ. 32/4 ರಲ್ಲಿನ 37 ಗುಂಟೆ, ಸ.ನಂ. 32/6 ರಲ್ಲಿನ 09 1/4 ಗುಂಟೆ, ಸ.ನಂ. 32/7 ರಲ್ಲಿನ 09 1/4 ಗುಂಟೆ, ಸ.ನಂ. 32/8 ರಲ್ಲಿನ 09 1/4 ಗುಂಟೆ, ಸ.ನಂ. 34/2 ರಲ್ಲಿನ 09 ಗುಂಟೆ, ಸ.ನಂ. 34/3 ರಲ್ಲಿನ 09 3/4 ಗುಂಟೆ, ಸ.ನಂ. 34/4 ರಲ್ಲಿನ 01 ಎಕರೆ 04 ಗುಂಟೆ, ಸ.ನಂ. 34/5 ರಲ್ಲಿನ 38 ಗುಂಟೆ, ಸ.ನಂ 34/8 ರಲ್ಲಿನ 03 1/4 ಗುಂಟೆ **ಒಟ್ಟು 09 ಎಕರೆ 21 ಗುಂಟೆ** ವಿಸ್ತೀರ್ಣದ ಜಮೀನುಗಳಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ.

ಅರ್ಜಿದಾರರು:– ಮೆ॥ ಎಂ. ಒನ್ ಪ್ರಾಪರ್ಟೀಸ್ ನ ಪರವಾಗಿ ಶ್ರೀ ಶಿವರಾಮಕೃಷ್ಣ ಪ್ರಸಾದ್ ಮುಸನೂರಿ

ಟಿಪ್ಪಣಿ:

1. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ಮೇಲ್ಕಂಡ ಜಮೀನುಗಳಿಗೆ ಸಂಬಂಧಿಸಿದಂತೆ ಅರ್ಜಿದಾರರಾದ **ಮೆ॥ ಎಂ. ಒಸ್ ಪ್ರಾಪರ್ಟೀಸ್ ನ ಪರವಾಗಿ ಶ್ರೀ ಶಿವರಾಮಕೃಷ್ಣ ಪ್ರಸಾದ್ ಮುಸನೂರಿ ರವರು** ತಮ್ಮ ಪ್ರಸ್ತಾವನೆಯೊಂದಿಗೆ ದಾಖಲಾತಿಗಳು ಹಾಗೂ ಕರಡು ನಕ್ಷೆಯನ್ನು ಸಲ್ಲಿಸಿ, ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ. ಪ್ರಸ್ತಾಪಿತ ಜಮೀನುಗಳು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಂತೆ ವಸತಿ ವಲಯ ಹಾಗೂ ಹಾಲಿ ರಸ್ತೆಯನ್ನು 18 ಮೀ. ಅಗಲಕ್ಕೆ ಅಗಲೀಕರಿಸಲು ಕಾಯ್ದಿರಿಸಲಾಗಿದ್ದು, ಅದರಂತೆ, ಪ್ರಸ್ತಾಪಿತ ಜಮೀನುಗಳನ್ನು ಜಿಲ್ಲಾಧಿಕಾರಿಗಳು ವಸತಿ ಉದ್ದೇಶಕ್ಕೆ ಈ ಕೆಳಕಂಡಂತೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ.

ಕ್ರ ಸಂ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	'ಬಿ' ಖರಾಬು	ಭೂ ಪರಿವರ್ತನಾ ಆದೇಶದ ಸಂಖ್ಯೆ
1	ಆಲಪ್ಪನಹಳ್ಳಿ	1/6	00-01	-	200396, ದಿನಾಂಕ: 12.01.2021
2		1/12	00-05 1/2	-	200395, ದಿನಾಂಕ: 12.01.2021
3		1/13	00-05 1/2	-	200398, ದಿನಾಂಕ: 12.01.2021
4		96/1	01-11 1/2	-	224331, ದಿನಾಂಕ: 28.07.2021
5		100/2	00-08	0-03/4	273378, ದಿನಾಂಕ: 12.11.2021
6		101/1	00-09	-	237384, ದಿನಾಂಕ: 05.08.2021
7		101/2	00-05	-	200397, ದಿನಾಂಕ: 12.01.2021
8		102/2	00-02	-	194970, ದಿನಾಂಕ: 30.11.2020
9	ಶಂಕರೇಮರ	25	00-09	-	224417, ದಿನಾಂಕ: 28.07.2021
10		26/4	00-37 1/2	00-03	237381, ದಿನಾಂಕ: 05.08.2021
11		26/12	00-01 1/2	-	194969, ದಿನಾಂಕ: 30.11.2020
12		26/13	00-13 1/2	00-01	194966, ದಿನಾಂಕ: 30.11.2020
13		26/15	00-17	00-01	49741, ದಿನಾಂಕ: 17.12.2019
14		32/2	00-37	-	LNDC10000556, ದಿನಾಂಕ: 29.10.2018
15		32/3	00-09 1/4	-	LNDC 10000550, ದಿನಾಂಕ: 30.07.2018
16		32/4	00-37	-	LAND10010209, ದಿನಾಂಕ: 12.03.2019
17		32/6	00-09 1/4	-	LNDC 10000552, ದಿನಾಂಕ: 30.07.2018
18		32/7	00-09 1/4	-	LNDC 10000559, ದಿನಾಂಕ: 19.09.2018
19		32/8	00-09 1/4	-	194972, ದಿನಾಂಕ: 05.12.2020
20		34/2	00-09	-	LAND10019778, ದಿನಾಂಕ: 24.06.2019
21		34/3	00-09 3/4	-	187512, ದಿನಾಂಕ: 13.10.2020
22		34/4	01-04	00-03	LAND10019766, ದಿನಾಂಕ: 21.06.2019
23		34/5	00-38	00-01	
24		34/8	00-03 1/4	00-01	187515, ದಿನಾಂಕ: 13.10.2020
ಒಟ್ಟು			09-21	00-10 3/4	

2. ಪ್ರಸ್ತಾಪಿತ ಜಮೀನುಗಳನ್ನು ಸ್ಥಳ ಪರಿಶೀಲಿಸಲಾಗಿ, ಸದರಿ ಜಮೀನುಗಳಿಗೆ ಆಲಪ್ಪನಹಳ್ಳಿ ಗ್ರಾಮದಿಂದ ಜಮೀನುಗಳಿಗೆ ಹೋಗುವ 9.70 ಮೀ. ಅಗಲದ ಗ್ರಾಮ ರಸ್ತೆಯಿಂದ ಸಂಪರ್ಕವಿರುತ್ತದೆ. ಅರ್ಜಿದಾರರು ಮಾಲೀಕತ್ವಕ್ಕೆ ಸಂಬಂಧಿಸಿದ ದಾಖಲೆಗಳಾದ ಕ್ರಯ ಪತ್ರ, ಆರ್.ಟಿ.ಸಿ., ಮ್ಯುಟೇಷನ್, ಇ.ಸಿ., ಜಂಟಿ ಸರ್ವೆ ನಕ್ಷೆ, ಗ್ರಾಮ ನಕ್ಷೆ, ಭೂ ಪರಿವರ್ತನಾ ಆದೇಶದ ಅಧಿಕೃತ ಜ್ಞಾಪನ ಪತ್ರಗಳು, ವಸತಿ ವಿನ್ಯಾಸ ನಕ್ಷೆಯ ಕರಡು ಪ್ರತಿ ಹಾಗೂ ಪ್ರಸ್ತಾಪಿತ ವಿನ್ಯಾಸಕ್ಕೆ ನೀರನ್ನು ಸರಬರಾಜು ಮಾಡುವ ಬಗ್ಗೆ ಕುಂಬಳಹಳ್ಳಿ ಗ್ರಾಮಪಂಚಾಯಿತಿಯಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಕರಡು ವಸತಿ ವಿನ್ಯಾಸ ನಕ್ಷೆಯಂತೆ ಭೂ ಉಪಯೋಗ ವಿಶ್ಲೇಷಣೆಯು ಈ ಕೆಳಕಂಡಂತೆ ಇರುತ್ತದೆ.

C. Nagaraj

ಕ್ರ. ಸಂ.	ಭೂ ಉಪಯೋಗ	ವಲಯ ನಿಯಮಾವಳಿಯನ್ವಯ	ಸಲ್ಲಿಸಿರುವ ನಕ್ಷೆ ಪ್ರಕಾರ	
			ಚ.ಮೀ. ಗಳಲ್ಲಿ	ಶೇಕಡ
1	ವಸತಿ	ಗರಿಷ್ಠ ಶೇ 55	21161.63	54.90
2.	ಉದ್ಯಾನವನ ಮತ್ತು ಬಯಲು ಜಾಗ	ಕನಿಷ್ಠ ಶೇ 10	3854.58	10.00
3.	ನಾಗರೀಕ ಸೌಲಭ್ಯ ನಿವೇಶನ	ಕನಿಷ್ಠ ಶೇ 5	1927.29	5.00
4.	ರಸ್ತೆಗಾಗಿ	–	11602.27	30.10
ಒಟ್ಟು			38545.77	100.00

3. ಮೇಲ್ಕಂಡ ಅಂಶಗಳನ್ವಯ ಅರ್ಜಿದಾರರು ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗೆ ಅನುಗುಣವಾಗಿರುವ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ, ಅವಶ್ಯಕತೆ ಕಂಡುಬಂದಲ್ಲಿ ಸೂಕ್ತವಾಗಿ ಮಾರ್ಪಡಿಸಿಕೊಂಡು, ಅರ್ಜಿದಾರರು ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸಿದ ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10.09.2015 ರನ್ವಯ ವಸತಿ ವಿನ್ಯಾಸ ಅಭಿವೃದ್ಧಿಪಡಿಸಲು ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡುವ ಬಗ್ಗೆ ವಿಷಯವನ್ನು ಸಭೆಯ ತೀರ್ಮಾನಕ್ಕಾಗಿ ಮಂಡಿಸಿದೆ.

ನಿರ್ಣಯ: ಟಿಪ್ಪಣಿಯಲ್ಲಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು. ನಿಗದಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು ನಕ್ಷೆಯಲ್ಲಿ ಅವಶ್ಯವಿರುವ ಬದಲಾವಣೆಗಳನ್ನು ಅಳವಡಿಸಿಕೊಂಡು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10.09.2015 ರನ್ವಯ ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಅಲಪ್ಪನಹಳ್ಳಿ ಗ್ರಾಮದ ಸ. ನಂ. 1/6 ರಲ್ಲಿನ 01 ಗುಂಟೆ, ಸ.ನಂ. 1/12 ರಲ್ಲಿನ 05 1/2 ಗುಂಟೆ, ಸ.ನಂ. 1/13 ರಲ್ಲಿನ 05 1/2 ಗುಂಟೆ, ಸ.ನಂ. 96/1 ರಲ್ಲಿನ 01 ಎಕರೆ 11 1/2 ಗುಂಟೆ, ಸ.ನಂ. 100/2 ರಲ್ಲಿನ 08 ಗುಂಟೆ, ಸ.ನಂ. 101/1 ರಲ್ಲಿನ 09 ಗುಂಟೆ, ಸ.ನಂ. 101/2 ರಲ್ಲಿನ 05 ಗುಂಟೆ, ಸ.ನಂ. 102/2 ರಲ್ಲಿನ 02 ಗುಂಟೆ ಮತ್ತು ಶಂಕಣೇಮರ ಗ್ರಾಮದ ಸ.ನಂ. 25 ರಲ್ಲಿನ 09 ಗುಂಟೆ, ಸ.ನಂ. 26/4 ರಲ್ಲಿನ 37 1/2 ಗುಂಟೆ, ಸ.ನಂ. 26/12 ರಲ್ಲಿನ 01 1/2 ಗುಂಟೆ ಸ.ನಂ. 26/13 ರಲ್ಲಿನ 13 1/2 ಗುಂಟೆ, ಸ.ನಂ. 26/15 ರಲ್ಲಿನ 17 ಗುಂಟೆ, ಸ.ನಂ. 32/2 ರಲ್ಲಿನ 37 ಗುಂಟೆ, ಸ.ನಂ. 32/3 ರಲ್ಲಿನ 09 1/4 ಗುಂಟೆ, ಸ.ನಂ. 32/4 ರಲ್ಲಿನ 37 ಗುಂಟೆ, ಸ.ನಂ. 32/6 ರಲ್ಲಿನ 09 1/4 ಗುಂಟೆ, ಸ.ನಂ. 32/7 ರಲ್ಲಿನ 09 1/4 ಗುಂಟೆ, ಸ.ನಂ. 32/8 ರಲ್ಲಿನ 09 1/4 ಗುಂಟೆ, ಸ.ನಂ. 34/2 ರಲ್ಲಿನ 09 ಗುಂಟೆ, ಸ.ನಂ. 34/3 ರಲ್ಲಿನ 09 3/4 ಗುಂಟೆ, ಸ.ನಂ. 34/4 ರಲ್ಲಿನ 01 ಎಕರೆ 04 ಗುಂಟೆ, ಸ.ನಂ. 34/5 ರಲ್ಲಿನ 38 ಗುಂಟೆ, ಸ.ನಂ 34/8 ರಲ್ಲಿನ 03 1/4 ಗುಂಟೆ **ಒಟ್ಟು 09 ಎಕರೆ 21 ಗುಂಟೆ** ವಿಸ್ತೀರ್ಣದ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

C. Nagaraj

ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಶೇ 100 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವ ಬಗ್ಗೆ.

ವಿಷಯ: 12

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಮುತ್ಸಂದ್ರ ಗ್ರಾಮದ ಸ.ನಂ. 32 ರಲ್ಲಿನ 01 ಎಕರೆ 17 ಗುಂಟೆ, ಸ.ನಂ. 36/2 ರ ಪೈಕಿ 14 ಗುಂಟೆ; ಕೋಟೂರು ಗ್ರಾಮದ ಸ.ನಂ. 39/1 ರಲ್ಲಿನ 09 ಗುಂಟೆ, ಸ.ನಂ. 39/2 ರಲ್ಲಿನ 08 ಗುಂಟೆ, ಸ.ನಂ 39/3 ರಲ್ಲಿನ 08 ಗುಂಟೆ, ಸ.ನಂ. 39/4 ರಲ್ಲಿನ 15 ಗುಂಟೆ ಮತ್ತು ಸ.ನಂ. 40/1 ರಲ್ಲಿನ 15 1/2 ಗುಂಟೆ ಹಾಗೂ ಗುಳ್ಳಕಾಯಿಮರ ಗ್ರಾಮದ ಸ.ನಂ. 8/1 ರಲ್ಲಿನ 12 ಗುಂಟೆ, ಸ.ನಂ. 8/2 ರಲ್ಲಿನ 08 ಗುಂಟೆ **ಒಟ್ಟು 03 ಎಕರೆ 26 1/2 ಗುಂಟೆ** (03 1/2 ಗುಂಟೆ 'ಎ' ಮತ್ತು 'ಬಿ' ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದ್ದು, ಸದರಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ ಶೇ 100 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವ ಬಗ್ಗೆ.

ಅರ್ಜಿದಾರರು: ಮೆ। ಕಾರ್ನರ್ ಸ್ಟೋನ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್ ನ ಪರವಾಗಿ ಸದರಿ ಕಂಪನಿಯ ಅಧಿಕೃತ ಸಹಿದಾರರಾದ ಶ್ರೀ ಸುರೇಶ್ ಆರ್.

ಟಿಪ್ಪಣಿ:

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೇಲ್ಕಂಡ ಜಮೀನುಗಳಿಗೆ ಈಗಾಗಲೇ ಈ ಪ್ರಾಧಿಕಾರದ ಪತ್ರ ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ/20/2020-21, ದಿನಾಂಕ: 21.12.2020 ರಂದು ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

2. ಸದರಿ ವಿನ್ಯಾಸವನ್ನು ಪೂರ್ಣ ರೀತಿಯಲ್ಲಿ ಅಭಿವೃದ್ಧಿ ಪಡಿಸಿರುವ ಬಗ್ಗೆ ಸಂಬಂಧಿಸಿದ ಇಲಾಖೆಗಳಾದ ತೋಟಗಾರಿಕೆ ಇಲಾಖೆ (ದಿನಾಂಕ: 30.09.2021); ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಹೊಸಕೋಟೆ ತಾಲ್ಲೂಕು (ದಿನಾಂಕ: 05.10.2021); ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಹೊಸಕೋಟೆ ತಾಲ್ಲೂಕು (ದಿನಾಂಕ: 08.10.2021); ವಿದ್ಯುತ್ ಸರಬರಾಜು ಮಾಡಿರುವ ಬಗ್ಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಲಿ. (ದಿನಾಂಕ: 02.02.2021); ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮುತ್ಸಂದ್ರ ಗ್ರಾಮಪಂಚಾಯಿತಿ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು (ದಿನಾಂಕ: 11.10.2021) ರವರುಗಳಿಂದ ಪಡೆದ ಮುಕ್ತಾಯ ಪ್ರಮಾಣ ಪತ್ರಗಳೊಂದಿಗೆ ಸದರಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವ ಬಗ್ಗೆ ಛಾಯಾಚಿತ್ರಗಳನ್ನು ಸಲ್ಲಿಸಲಾಗಿರುತ್ತದೆ.

3. ಪ್ರಸ್ತಾಪಿತ ವಸತಿ ವಿನ್ಯಾಸದ ಸ್ಥಳ ಪರಿಶೀಲಿಸಲಾಗಿದೆ. ಸಂಬಂಧಿಸಿದ ಇಲಾಖೆಗಳಿಂದ ನೀಡಿದ ಮುಕ್ತಾಯ ಪ್ರಮಾಣ ಪತ್ರಗಳಂತೆ ಅಭಿವೃದ್ಧಿ ಕಾರ್ಯಗಳನ್ನು ಸಮರ್ಪಕವಾಗಿ ಕಲ್ಪಿಸಲಾಗಿದ್ದು, ಮೇಲ್ಕಂಡ ಅಂಶಗಳನ್ವಯ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ ಶೇ 100 ರಷ್ಟು ನಿವೇಶನಗಳನ್ನು ನೋಂದಣಿಗೆ ಬಿಡುಗಡೆ ಮಾಡುವ ಸಂಬಂಧ ವಿಷಯವನ್ನು ಸಭೆಯ ತೀರ್ಮಾನಕ್ಕೆ ಮಂಡಿಸಿದೆ.

ನಿರ್ಣಯ:

ಟಿಪ್ಪಣಿಯಲ್ಲಿನ ಅಂಶಗಳನ್ನು ಚರ್ಚಿಸಲಾಯಿತು. ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಪ್ರಕಟಣೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10.09.2015 ರನ್ವಯ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ ಶೇ 100 ರಷ್ಟು ನಿವೇಶನಗಳನ್ನು ನೋಂದಣಿಗೆ ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

C. Nayaki

ವಸತಿ ವಿನ್ಯಾಸ ನಕ್ಷೆಯಲ್ಲಿನ ಮೊದಲನೇ (ಶೇ 40 ರಷ್ಟು) ಹಂತದ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

ವಿಷಯ: 13

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಹುಲ್ಲೂರು ಅಮಾನಿಕೆರೆ ಗ್ರಾಮದ ಸ. ನಂ. 144/14, 145/1ಬಿ ಮತ್ತು ಇತರೆ; ಹುಲಸಹಳ್ಳಿ ಗ್ರಾಮದ ಸ.ನಂ. 18/1, 18/6, 18/8, 18/9 ಹಾಗೂ ದೊಡ್ಡಹುಲ್ಲೂರು ಗ್ರಾಮದ ಸ.ನಂ. 16/11 ರ ಜಮೀನುಗಳಲ್ಲಿ **ಒಟ್ಟು 31 ಎಕರೆ 26 3/4 ಗುಂಟೆ** (29 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದಿಸಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 26 ಶಾಸನ 2021, ಬೆಂಗಳೂರು, ದಿನಾಂಕ: 05.07.2021 ರನ್ವಯ ಸದರಿ ವಿನ್ಯಾಸದಲ್ಲಿನ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಲು ಅರ್ಜಿದಾರರು ಕೋರಿರುವ ಬಗ್ಗೆ.

ಅರ್ಜಿದಾರರು: ಶ್ರೀ ಹರ್ಷರೆಡ್ಡಿ, ಪಾಲುದಾರರು, ಮೆ॥ ತಾಪಸಿ ಪ್ರಾಜೆಕ್ಟ್ಸ್

ಟಿಪ್ಪಣಿ:

1. ಪ್ರಸ್ತಾಪಿತ ಜಮೀನುಗಳಿಗೆ ದಿನಾಂಕ: 09.10.2019 ರ ಪ್ರಾಧಿಕಾರದ 80 ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: (27) ರ ನಿರ್ಣಯದನ್ವಯ ಅಗತ್ಯ ಕ್ರಮಗಳನ್ನು ಕೈಗೊಂಡು ಈ ಪ್ರಾಧಿಕಾರದ ಮಂಜೂರಾತಿ ಆದೇಶ ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ/35/2018-19, ದಿನಾಂಕ: 04.01.2020 ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದಿಸಿ, ಸ್ಥಳದಲ್ಲಿ ಅಭಿವೃದ್ಧಿ ಪಡಿಸಲು ವಸತಿ ವಿನ್ಯಾಸವನ್ನು ಅನುಮೋದಿಸಲಾಗಿತ್ತು.
2. ಅರ್ಜಿದಾರರು ದಿನಾಂಕ: 18.10.2021 ರಂದು ಮನವಿ ಪತ್ರವನ್ನು ಸಲ್ಲಿಸಿ, ಕೋವಿಡ್-19 ರ ಹಿನ್ನೆಲೆಯಲ್ಲಿ ನಿರಂತರವಾದ ಲಾಕ್‌ಡೌನ್ ಆದ ಕಾರಣ, ವಿನ್ಯಾಸದಲ್ಲಿನ ಉದ್ಯಾನವನ ಮತ್ತು ಬಯಲು ಜಾಗ, ರಸ್ತೆ, ಎಸ್.ಟಿ.ಪಿ., ಓ.ಹೆಚ್.ಟಿ., ನೀರಿನ ಪೈಪ್ ಲೈನ್, ಯುಜಿಡಿ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗಿಯವುದಿಲ್ಲ. ಆದರೂ ಸಹ ಬಹುತೇಕ ಕಾಮಗಾರಿಯು ಅಂತಿಮ ಹಂತದಲ್ಲಿದ್ದು, ಪ್ರಸ್ತಾಪಿತ ವಿನ್ಯಾಸವನ್ನು ರೇರಾ ಕಾಯ್ದೆಯ ಅಡಿಯಲ್ಲಿ ನೋಂದಾಯಿಸಲಾಗಿದ್ದು, ಕೆಲವು ನಿವೇಶನಗಳನ್ನು ಈಗಾಗಲೇ ಕರಾರು ಪತ್ರದ ಮೂಲಕ ಮುಂಗಡ ಪಡೆದಿರುವ ಹಿನ್ನೆಲೆಯಲ್ಲಿ ಸದರಿ ನಿವೇಶನ ಖರೀದಿದಾರರಿಗೆ ನಿಗದಿತ ಅವಧಿಯೊಳಗೆ ನಿವೇಶನಗಳನ್ನು ನೀಡಬೇಕಾಗಿರುತ್ತದೆ. ಹಾಗಾಗಿ, ಸದರಿ ನಿವೇಶನಗಳನ್ನು ಮಾರಾಟ ಮಾಡುವ / ನೋಂದಾಯಿಸುವ ಸಂಬಂಧ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 26 ಶಾಸನ 2021, ಬೆಂಗಳೂರು, ದಿನಾಂಕ: 05.07.2021 ರನ್ವಯ ವಿನ್ಯಾಸದಲ್ಲಿನ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಿದಲ್ಲಿ ಸಹಕಾರಿಯಾಗುತ್ತದೆ ಎಂದು ತಿಳಿಸಿ ವಿನ್ಯಾಸದಲ್ಲಿನ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಿಕೊಡಲು ಕೋರಿರುತ್ತಾರೆ.
3. ಅರ್ಜಿದಾರರ ಕೋರಿಯನ್ನು ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 26 ಶಾಸನ 2021, ಬೆಂಗಳೂರು, ದಿನಾಂಕ: 05.07.2021 ರನ್ವಯ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದ ನಂತರ ಅರ್ಜಿದಾರರು ವಿನ್ಯಾಸದಲ್ಲಿ ಸಾರ್ವಜನಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ ಉದ್ಯಾನವನ ಮತ್ತು ಬಯಲು ಜಾಗ ಹಾಗೂ ರಸ್ತೆ ಪ್ರದೇಶಗಳನ್ನು ಸಂಬಂಧಿಸಿದ ಸ್ಥಳೀಯ ಗ್ರಾಮಪಂಚಾಯಿತಿಗೆ ಪರಿತ್ಯಜನಾ ಪತ್ರದ ಮೂಲಕ ದಿನಾಂಕ: 04.12.2019 ರಂದು ನೋಂದಾಯಿಸಿರುತ್ತಾರೆ. ಅಲ್ಲದೆ, ವಿನ್ಯಾಸದಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ ನಿವೇಶನಗಳನ್ನು ಹೊಸಕೋಟೆ ಯೋಜನಾ ಪ್ರಾಧಿಕಾರದ ಹೆಸರಿಗೆ ದಿನಾಂಕ: 04.12.2019 ರಂದು ನೋಂದಾಯಿಸಲಾಗಿರುತ್ತದೆ. ಅಲ್ಲದೆ, ಸದರಿ ವಿನ್ಯಾಸವನ್ನು ಕರ್ನಾಟಕ ರಾಜ್ಯ

C. Nagaraj

ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ದಿನಾಂಕ: 15.05.2020 ರಂದು ನೋಂದಾಯಿಸಲಾಗಿದ್ದು, ಸದರಿ ನೋಂದಾಯಿತ ಪತ್ರದ ಪ್ರತಿಯನ್ನು ಸಲ್ಲಿಸಿರುತ್ತಾರೆ.

4. ಹಾಗಾಗಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 26 ಶಾಸನ 2021, ಬೆಂಗಳೂರು, ದಿನಾಂಕ: 05.07.2021 ರನ್ವಯ ತಾತ್ಕಾಲಿಕವಾಗಿ ಅನುಮೋದಿಸಲಾದ ವಸತಿ ವಿನ್ಯಾಸದ ಪೈಕಿ ಶೇ 40 ರಷ್ಟು ನಿವೇಶನಗಳನ್ನು ಮುಂಗಡವಾಗಿ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸದೇ ನಿವೇಶನಗಳನ್ನು ಬಿಡುಗಡೆ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಉಳಿದ ಶೇ 60 ರಷ್ಟು ನಿವೇಶನಗಳನ್ನು ವಿನ್ಯಾಸ ದಲ್ಲಿನ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಪೂರ್ಣಗೊಳಿಸಿದ ನಂತರ ಬಿಡುಗಡೆ ಗೊಳಿಸುವ ನಿಬಂಧನೆಗೊಳಪಟ್ಟು ಹಾಗೂ ವಿನ್ಯಾಸದಲ್ಲಿ ಬರುವ ಎಲ್ಲಾ ಮೂಲೆ ನಿವೇಶನಗಳನ್ನು ಪ್ರಾಧಿಕಾರಕ್ಕೆ ನೋಂದಾಯಿತ ಅಡಮಾನ ಒಪ್ಪಂದ ಪತ್ರದ ಮುಖಾಂತರ ಅಡಮಾನ ಮಾಡಿಕೊಳ್ಳುವ ನಿಬಂಧನೆಗೊಳಪಟ್ಟು ಅರ್ಜಿದಾರರ ಮನವಿಯನ್ನು ಪರಿಶೀಲಿಸಬಹುದಾಗಿರುತ್ತದೆ.

5. ಆದರೆ, ಶ್ರೀಮತಿ ಪುಷ್ಪ ಬಿನ್ ಲೇಟ್ ಗುರುಮೂರ್ತಿ ಕೋಂ ಶ್ರೀನಿವಾಸ್, ಚೂಡೇಹಳ್ಳಿ ಗ್ರಾಮ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರು ಪ್ರಸ್ತಾಪಿತ ವಿನ್ಯಾಸದ ಭಾಗವಾಗಿರುವ ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಹಲಸಹಳ್ಳಿ ಗ್ರಾಮದ ಸ.ನಂ. 18/4 ರ ಹೊಸ ಸ.ನಂ. 18/6 ರಲ್ಲಿನ 01 ಎಕರೆ 27 ಗುಂಟೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ ಪ್ರಿನ್ಸಿಪಲ್ ಸೀನಿಯರ್ ಸಿವಿಲ್ ಜಡ್ಜ್, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ದಾವೆ ಸಂಖ್ಯೆ: ಓ.ಎಸ್.264/2019 (ಎಫ್.ಆರ್ ನಂ. ಓ.ಎಸ್. 274/2019) ರಲ್ಲಿ ದಾವೆಯನ್ನು ಹೂಡಿದ್ದು, ಸದರಿ ದಾವೆಯಲ್ಲಿ ತಡೆಯಾಜ್ಞೆಯನ್ನು ನೀಡಿದ್ದು, ಸದರಿ ದಾವೆಯು ಇತ್ಯರ್ಥವಾಗುವ ವರೆಗೆ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಬಾರದೆಂದು ಕೋರಿರುತ್ತಾರೆ. ಈ ಬಗ್ಗೆ ಪರಿಶೀಲಿಸಲಾಗಿ, ಅರ್ಜಿದಾರರು ಪ್ರಸ್ತಾಪಿತ ಜಮೀನುಗಳಲ್ಲದೇ ಇತರೆ ಜಮೀನುಗಳಿಗೂ ಸಂಬಂಧಿಸಿದಂತೆ ಸಹ (ಸ.ನಂ. 18/2ರ ಹೊಸ ಸ.ನಂ. 18/7, 18/3, 18/4 ರ ಹೊಸ ಸ.ನಂ. 18/6) ದಾವೆ ಹೂಡಿರುತ್ತಾರೆ. ಆದರೆ, ಅರ್ಜಿದಾರರು ದಾವೆ ಹೂಡಿರುವ ಜಮೀನಿನ ವಿಸ್ತೀರ್ಣದ ಪೈಕಿ ಸ.ನಂ. 18/6 ರಲ್ಲಿನ 23 ಗುಂಟೆ ಜಮೀನು ಮಾತ್ರ ವಿನ್ಯಾಸ ನಕ್ಷೆಯಲ್ಲಿ ಸೇರಿರುತ್ತದೆ. ಈ ಬಗ್ಗೆ ವಿನ್ಯಾಸದ ಮಾಲೀಕರು / ಅಭಿವೃದ್ಧಿದಾರರಿಗೆ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಪತ್ರ ಮುಖೇನ ತಿಳಿಸಲಾಗಿದ್ದು, ಸದರಿಯವರು ದಿನಾಂಕ: 16.11.2021 ರಂದು ಈ ಕಛೇರಿಗೆ ತಮ್ಮ ಲಿಖಿತ ಹೇಳಿಕೆ ಹಾಗೂ ಪ್ರಮಾಣ ಪತ್ರದ ಮೂಲಕ ಮನವಿ ಸಲ್ಲಿಸಿ ಪ್ರಸ್ತಾಪಿತ ವಿನ್ಯಾಸದ ಒಟ್ಟಾರೆ ವಿಸ್ತೀರ್ಣವು 31 ಎಕರೆ 26 3/4 ಗುಂಟೆ ಇದ್ದು, ಅದರಲ್ಲಿ ಕೇವಲ 23 ಗುಂಟೆಗೆ ವಿಸ್ತೀರ್ಣದ ಜಮೀನಿಗೆ ಮಾತ್ರ ಸಂಬಂಧಿಸಿದಂತೆ ಶ್ರೀಮತಿ ಪುಷ್ಪ ಎಂಬುವವರು ತಮ್ಮ ಭಾಗಕ್ಕೆ ಬರುವ ಜಮೀನಿನ ಮೇಲೆ ದಾವೆ ಹೂಡಿರುತ್ತಾರೆ.

6. ಆದುದರಿಂದ, ಸದರಿ ವಿನ್ಯಾಸದ ಭಾಗವಾಗಿರುವ ಹಲಸಹಳ್ಳಿ ಗ್ರಾಮದ ಸ.ನಂ. 18/6 ರಲ್ಲಿನ 23 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಯಾವುದೇ ನಿವೇಶನಗಳನ್ನು ಬಿಡುಗಡೆ ಮಾಡಲು ಕೋರುತ್ತಿಲ್ಲವೆಂದು ಹಾಗೂ ಒಂದುವೇಳೆ ಶ್ರೀಮತಿ ಪುಷ್ಪ ರವರ ಪರವಾಗಿ ನ್ಯಾಯಾಲಯದಿಂದ ಆದೇಶವಾದಲ್ಲಿ ಸದರಿ ಜಮೀನನ್ನು ಹೊರತುಪಡಿಸಿ ವಿನ್ಯಾಸವನ್ನು ಮಾರ್ಪಡಿಸಲು ಸಹ ಬದ್ಧರಾಗಿರುತ್ತೇವೆ ಎಂದು ಪ್ರಮಾಣ ಪತ್ರ ಹಾಗೂ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದರಿಂದ ಹಲಸಹಳ್ಳಿ ಗ್ರಾಮದ ಸ.ನಂ. 18/6 ರಲ್ಲಿನ 23 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಬರುವ ನಿವೇಶನಗಳನ್ನು ಹೊರತುಪಡಿಸಿ ಉಳಿದ ಇತರೆ ಜಮೀನುಗಳಲ್ಲಿ ಬರುವ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

C. Nayaj

7. ಮೇಲ್ಕಂಡ ಅಂಶಗಳನ್ವಯ ಹುಲ್ಲೂರು ಅಮಾನಿಕೆರೆ ಗ್ರಾಮದ ಸ. ನಂ. 144/14, 145/1ಬಿ ಮತ್ತು ಇತರೆ; ಹಲಸಹಳ್ಳಿ ಗ್ರಾಮದ ಸ.ನಂ. 18/1, 18/6, 18/8, 18/9 ಹಾಗೂ ದೊಡ್ಡಹುಲ್ಲೂರು ಗ್ರಾಮದ ಸ.ನಂ. 16/11 ರ ಜಮೀನುಗಳಲ್ಲಿ **ಒಟ್ಟು 31 ಎಕರೆ 26 3/4 ಗುಂಟೆ** (29 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಿಗೆ ಅನುಮೋದಿಸಲಾಗಿರುವ ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಸಂಬಂಧ ವಿಷಯವನ್ನು ಸಭೆಯ ಚರ್ಚೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ.

ನಿರ್ಣಯ:

ಎ) ಟಿಪ್ಪಣಿಯಲ್ಲಿನ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ಪ್ರಸ್ತಾಪಿತ ವಿನ್ಯಾಸದಲ್ಲಿನ ಹಲಸಹಳ್ಳಿ ಗ್ರಾಮದ ಜಮೀನಿನ ಪೈಕಿ ಸ.ನಂ. 18/6 ರಲ್ಲಿನ 23 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಯಾವುದೇ ನಿವೇಶನಗಳನ್ನು ಬಿಡುಗಡೆ ಮಾಡದೇ ಉಳಿಕೆ ಜಮೀನುಗಳಲ್ಲಿನ ನಿವೇಶನಗಳ ಪೈಕಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 26 ಶಾಸನ 2021, ಬೆಂಗಳೂರು, ದಿನಾಂಕ: 05.07.2021 ರನ್ವಯ ವಿನ್ಯಾಸದಲ್ಲಿ ಬರುವ ಎಲ್ಲಾ ಮೂಲೆ ನಿವೇಶನಗಳನ್ನು ಪ್ರಾಧಿಕಾರಕ್ಕೆ ಸೋಂದಾಯಿತ ಅಡಮಾನ ಒಪ್ಪಂದ ಪತ್ರದ ಮುಖಾಂತರ ಅಡಮಾನ ಮಾಡಿಕೊಂಡು ಈಗಾಗಲೇ ಅನುಮೋದಿಸಲಾದ ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ ಮೂಲೆ ನಿವೇಶನಗಳನ್ನು ಹೊರತುಪಡಿಸಿ, ವಿನ್ಯಾಸದ ಶೇ 40 ರಷ್ಟು ನಿವೇಶನಗಳನ್ನು ನಿಯಮಾನುಸಾರ ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಬಿ) ಮುಂದಿನ ದಿನಗಳಲ್ಲಿ ಇದೇ ರೀತಿ ಈಗಾಗಲೇ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗಳನ್ನು ಅನುಮೋದಿಸಿರುವ / ಅನುಮೋದಿಸುವ ವಸತಿ ವಿನ್ಯಾಸದಲ್ಲಿನ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಕೋರುವಂತಹ ಪ್ರಸ್ತಾವನೆಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 26 ಶಾಸನ 2021, ಬೆಂಗಳೂರು, ದಿನಾಂಕ: 05.07.2021 ರನ್ವಯ ತಾತ್ಕಾಲಿಕ ವಸತಿ ವಿನ್ಯಾಸದ ಪೈಕಿ ಶೇ 40 ರಷ್ಟು ನಿವೇಶನಗಳನ್ನು ನಿಯಮಾನುಸಾರ ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸ ಲಾಯಿತು. ಮುಂದುವರೆದು, ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂದರ್ಭಗಳಲ್ಲಿ ಮಾತ್ರ ಪ್ರಾಧಿಕಾರದ ಸಭೆಗಳಲ್ಲಿ ವಿಷಯವನ್ನು ಮಂಡಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರ ನೀಡಿ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ

ವಿಷಯ: 14

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಮರ ಗ್ರಾಮದ ಸ.ನಂ. 29/2 ರಲ್ಲಿನ **02 ಎಕರೆ 38 ಗುಂಟೆ** ವಿಸ್ತೀರ್ಣದ ಜಮೀನನ್ನು ಕೃಷಿ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ
ಅರ್ಜಿದಾರರು: ಶ್ರೀ ಎಸ್. ಸಂಪಂಗಿ ರೆಡ್ಡಿ

ಟಿಪ್ಪಣಿ

1. ಅರ್ಜಿದಾರರಾದ **ಶ್ರೀ ಎಸ್. ಸಂಪಂಗಿ ರೆಡ್ಡಿ** ರವರು ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಮರ ಗ್ರಾಮದ ಸ.ನಂ. 29/2 ರಲ್ಲಿನ **02 ಎಕರೆ 38 ಗುಂಟೆ** ವಿಸ್ತೀರ್ಣದ ಜಮೀನನ್ನು ಕೃಷಿ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

2. ಸಲ್ಲಿಸಿರುವ ದಾಖಲಾತಿಗಳ ರೀತ್ಯ ಪ್ರಶ್ನಿತ ಜಮೀನು **ಶ್ರೀ ಎಸ್. ಸಂಪಂಗಿ ರೆಡ್ಡಿ** ರವರ ಹೆಸರಿನಲ್ಲಿದ್ದು, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಮೋದನೆಯಾದ ಮಹಾಯೋಜನೆಯಂತೆ ಪ್ರಶ್ನಿತ ಜಮೀನುಗಳು ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ.

3. ಪ್ರಸ್ತಾಪಿತ ಜಮೀನನ್ನು ಸ್ಥಳ ಪರಿಶೀಲಿಸಲಾಗಿದ್ದು, ಅರ್ಜಿದಾರರು ಸಲ್ಲಿಸಿರುವ ದಾಖಲೆಗಳನ್ವಯ ಹಾಗೂ ಹಾಲಿ ಸ್ಥಿತಿಯಂತೆ ಪ್ರಸ್ತಾಪಿತ ಜಮೀನಿಗೆ ವಾಲೇಪುರದಿಂದ ಚಿಕ್ಕನಕುಂದಿಗೆ ಹೋಗುವ ಹಾಲಿ 14 ಮೀ. ಅಗಲದ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ.

4. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರ ಅಡಿಯಲ್ಲಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗೆ ಸಂಬಂಧಿಸಿದಂತೆ 15 ದಿನಗಳ ಕಾಲಾವಕಾಶವನ್ನು ನೀಡಿ, **"ಉದಯವಾಣಿ" ಹಾಗೂ "ಕನ್ನಡ ಪ್ರಭ"** ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಆಕ್ಷೇಪಣೆಗಳನ್ನು ಆಹ್ವಾನಿಸಿ ದಿನಾಂಕ: **30.10.2021** ರಂದು ಪ್ರಕಟಣೆಯನ್ನು ನೀಡಲಾಗಿತ್ತು. ನಿಗಧಿತ ಅವಧಿಯಲ್ಲಿ ಸಾರ್ವಜನಿಕರಿಂದ ಯಾವುದೇ ರೀತಿಯ ಲಿಖಿತ ಸಲಹೆ/ಸೂಚನೆ/ ಆಕ್ಷೇಪಣೆಗಳು ಈ ಕಛೇರಿಯಲ್ಲಿ ಸ್ವೀಕೃತವಾಗಿರುವುದಿಲ್ಲ.

5. ತಮ್ಮ ಮನವಿಯಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಂದಿಕೊಂಡಿರುತ್ತದೆ. ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿದ್ದು, ಸದರಿ ವಿನ್ಯಾಸವನ್ನು ಅಭಿವೃದ್ಧಿ ಪಡಿಸುವುದರಿಂದ ಸೂಕ್ತವಾದ ದರದಲ್ಲಿ ಉತ್ತಮ ಸೌಲಭ್ಯಗಳನ್ನುಳ್ಳ ಬಡಾವಣೆಯ ನಿವೇಶನಗಳು ದೊರಕುವುದರಿಂದ ಸ್ಥಳೀಯ ಹಾಗೂ ಸುತ್ತಲಿನ ಸಾರ್ವಜನಿಕರಿಗೆ ಅನುಕೂಲವಾಗುವುದೆಂಬ ಆಶಯದಿಂದ ಬಡಾವಣೆ ಅಭಿವೃದ್ಧಿಪಡಿಸಲು ಸದರಿ ಜಮೀನನ್ನು **'ಕೃಷಿ ವಲಯದಿಂದ ವಸತಿ ವಲಯ'** ಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛೆಸಿರುವುದಾಗಿ ತಿಳಿಸಿರುತ್ತಾರೆ. ಈ ಅಂಶವನ್ನು ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗಿರುತ್ತದೆ.

6. ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 165 ಬಿಎಂಆರ್ 2012 ದಿನಾಂಕ: 12.10.2012 ರಂದು ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ಮಾರ್ಗಸೂಚಿಯ Proviso 4 of 14A (1) ರ ಅಡಿಯಲ್ಲಿನ (e) ರಂತೆ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿರುತ್ತದೆ.

7. ಅರ್ಜಿದಾರರು ತಮ್ಮ ಸ್ವಂತ ಖರ್ಚಿನಿಂದ ವಸತಿ ವಿನ್ಯಾಸಕ್ಕೆ ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ ಹಾಗೂ ಸದರಿ ಸೌಕರ್ಯಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಯಿಂದ ಮುಂದುವರೆಸಿಕೊಂಡು ಹೋಗುವ ಕುರಿತು ಮುತ್ಸಂದ್ರ ಗ್ರಾಮಪಂಚಾಯಿತಿಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಪ್ರಸ್ತಾಪಿತ ಜಮೀನು ಗುಳ್ಳಕಾಯಿಮರ ಗ್ರಾಮಠಾಣಾಗೆ ಹತ್ತಿರದಲ್ಲಿದ್ದು, ಅನೇಕ ವಸತಿ ಅಭಿವೃದ್ಧಿಗಳು ಬಂದಿರುವ ಹಿನ್ನೆಲೆಯಲ್ಲಿ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಸೂಕ್ತವಾಗಿರುತ್ತದೆ ಎಂದು ಅಭಿಪ್ರಯಿಸಲಾಗಿರುತ್ತದೆ.

8. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಮರ ಗ್ರಾಮದ ಸ.ನಂ. 29/2 ರಲ್ಲಿನ **02 ಎಕರೆ 38 ಗುಂಟೆ** ವಿಸ್ತೀರ್ಣದ ಜಮೀನನ್ನು "ಕೃಷಿ ಉದ್ದೇಶದಿಂದ ವಸತಿ ವಲಯಕ್ಕೆ" ಭೂ ಉಪಯೋಗ ಬದಲಾವಣೆ ಕೋರಿರುವ ಸಂಬಂಧ ಪ್ರಸ್ತಾವನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಪರಿಗಣಿಸಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮುಖಾಂತರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವ ಕುರಿತು ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

ನಿರ್ಣಯ: ಟಿಪ್ಪಣಿಯಲ್ಲಿನ ಅಂಶಗಳನ್ನು ಚರ್ಚಿಸಲಾಯಿತು. ಪ್ರಸ್ತಾಪಿತ ಜಮೀನುಗಳು ಅರ್ಜಿದಾರರು ತಮ್ಮ ಸ್ವಂತ ಖರ್ಚಿನಿಂದ ವಸತಿ ವಿನ್ಯಾಸಕ್ಕೆ ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ ಹಾಗೂ ಸದರಿ ಸೌಕರ್ಯಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಯಿಂದ ಮುಂದುವರೆಸಿಕೊಂಡು ಹೋಗುವ ಕುರಿತು ಮುತ್ಸಂದ್ರ ಗ್ರಾಮಪಂಚಾಯಿತಿಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಪ್ರಸ್ತಾಪಿತ ಜಮೀನು ಗುಳ್ಳಕಾಯಿಮರ ಗ್ರಾಮಠಾಣಾಗೆ ಹತ್ತಿರದಲ್ಲಿದ್ದು, ಅನೇಕ ವಸತಿ ಅಭಿವೃದ್ಧಿಗಳು ಬಂದಿರುವ ಹಿನ್ನೆಲೆಯಲ್ಲಿ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವುದು ಸೂಕ್ತವಾಗಿರುತ್ತದೆ ಹಾಗಾಗಿ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಮರ ಗ್ರಾಮದ ಸ.ನಂ. 29/2 ರಲ್ಲಿನ **02 ಎಕರೆ 38 ಗುಂಟೆ** ವಿಸ್ತೀರ್ಣದ ಜಮೀನನ್ನು "ಕೃಷಿ ಉದ್ದೇಶದಿಂದ ವಸತಿ ವಲಯಕ್ಕೆ" ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮುಖಾಂತರ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಸತಿ ಏಕ ನಿವೇಶನ ನಕ್ಷೆಗೆ ನೀಡಲಾದ ಅನುಮೋದನೆಯನ್ನು ರದ್ದುಗೊಳಿಸುವ ಬಗ್ಗೆ.

ವಿಷಯ: 15 ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಹಾರೋಹಳ್ಳಿ ಗ್ರಾಮದ ಸ.ನಂ. 66/1 ರಲ್ಲಿ 02 ಎಕರೆ 26 ಗುಂಟೆ, ಸ ನಂ. 66/2 ರಲ್ಲಿ 03 ಎಕರೆ 24 ಗುಂಟೆ, ಸ.ನಂ. 67/1 ರಲ್ಲಿ 01 ಎಕರೆ, ಸ.ನಂ. 67/2 ರಲ್ಲಿ 10 ಗುಂಟೆ, ಸ.ನಂ. 67/3 ರಲ್ಲಿ 18 ಗುಂಟೆ, ಸ.ನಂ. 70/1 ರಲ್ಲಿ 10 ಗುಂಟೆ, ಸ.ನಂ. 70/2 ರಲ್ಲಿ 17 1/2 ಗುಂಟೆ, ಸ.ನಂ. 70/3 ರಲ್ಲಿ 18 ಗುಂಟೆ, ಸ.ನಂ. 70/4 ರಲ್ಲಿ 01 ಎಕರೆ 05 1/2 ಗುಂಟೆ, ಸ.ನಂ. 70/5 ರಲ್ಲಿ 01 ಎಕರೆ 06 ಗುಂಟೆ, ಸ.ನಂ. 71/1 ರಲ್ಲಿ 18 1/4 ಗುಂಟೆ, ಸ.ನಂ. 71/2 ರಲ್ಲಿ 08 3/4 ಗುಂಟೆ, ಸ.ನಂ. 71/3 ರಲ್ಲಿ 09 ಗುಂಟೆ, ಸ.ನಂ. 71/4 ರಲ್ಲಿ 09 ಗುಂಟೆ, ಸ.ನಂ. 71/5 ರಲ್ಲಿ 08 ಗುಂಟೆ, ಸ.ನಂ. 72/1 ರಲ್ಲಿ 21 1/2 ಗುಂಟೆ, ಸ.ನಂ. 72/2 ರಲ್ಲಿ 21 ಗುಂಟೆ, ಸ.ನಂ. 72/3 ರಲ್ಲಿ 21 1/2 ಗುಂಟೆ, ಸ.ನಂ. 74/1 ರಲ್ಲಿ 33 ಗುಂಟೆ, ಸ.ನಂ. 74/2 ರಲ್ಲಿ 15 ಗುಂಟೆ, ಸ.ನಂ. 83/3 ರಲ್ಲಿ 04 ಗುಂಟೆ ಮತ್ತು ಸ.ನಂ. 83/4 ರಲ್ಲಿ 01 ಎಕರೆ 09 ಗುಂಟೆ ಒಟ್ಟು 16 ಎಕರೆ 33 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದ್ದು, ವಿನ್ಯಾಸದಲ್ಲಿನ ಶೇ. 60 ನಿವೇಶನಗಳನ್ನು ಸೋಂದಣಿಗಾಗಿ ಬಿಡುಗಡೆ ಮಾಡಲಾಗಿದ್ದು, ಅರ್ಜಿದಾರರು ವಿನ್ಯಾಸ ಅನುಮೋದನೆ ಪಡೆಯುವ ಸಂದರ್ಭದಲ್ಲಿ ಸುಳ್ಳು ದಾಖಲೆಗಳನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ಈಗಾಗಲೇ ಅನುಮೋದಿಸಲಾಗಿರುವ ವಿನ್ಯಾಸವನ್ನು ಕೆ.ಟಿ.ಸಿ.ಪಿ. ಕಾಯ್ದೆ, 1961 ರ ಕಲಂ 76(ಓ) ರಡಿಯಲ್ಲಿ ತಾತ್ಕಾಲಿಕವಾಗಿ ರದ್ದುಪಡಿಸುವ ಬಗ್ಗೆ.

C. Nayak

ಟಿಪ್ಪಣಿ:

1. ಈ ಕಛೇರಿ ಪತ್ರ ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ/09/2012–13, ದಿನಾಂಕ: 23.07.2012 ರಲ್ಲಿ ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಹಾರೋಹಳ್ಳಿ ಗ್ರಾಮದ ಸ.ನಂ. 66/1 ಮತ್ತು ವಿವಿಧ ಸ.ನಂ. ಗಳಲ್ಲಿನ ಒಟ್ಟು 16 ಎಕರೆ 33 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದ್ದು, ವಿನ್ಯಾಸದಲ್ಲಿನ ಶೇ. 60 ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲಾಗಿರುತ್ತದೆ.

   ಆದರೆ, ದಿನಾಂಕ: 22.08.2016 ರಲ್ಲಿ ಶ್ರೀ ಜಿ.ಆರ್. ಸುಬ್ರಮಣಿ, ಕಣ್ಣೂರಹಳ್ಳಿ, ಹೊಸಕೋಟೆ ತಾಲ್ಲೂಕು ಇವರು ಈ ಕಛೇರಿಗೆ ತಕರಾರನ್ನು ಸಲ್ಲಿಸಿ ಮೇಲ್ಕಂಡ ಅನುಮೋದನೆಯಾಗಿರುವ ವಿವಿಧ ಸ.ನಂ. ಜಮೀನುಗಳ ಪೈಕಿ ಸ.ನಂ. 66/2 ರಲ್ಲಿನ 03 ಎಕರೆ 24 ಗುಂಟೆ ಹಾಗೂ ಸ.ನಂ. 74/1 ರಲ್ಲಿನ 33 ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಈ ಕಛೇರಿಯಿಂದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಮುಂಚಿತವಾಗಿಯೇ ಶ್ರೀ ಹೆಚ್.ಜೆ. ರಮೇಶ್ ಇವರು ಕ್ರಯ ಪತ್ರದ ಮೂಲಕ ತಮಗೆ ಮಾರಾಟ ಮಾಡಿರುತ್ತಾರೆ ಎಂದು ದೂರನ್ನು ಸಲ್ಲಿಸಿ, ಸದರಿ ಜಮೀನುಗಳಿಗೆ ಅನುಮೋದನೆ ನೀಡಲಾಗಿರುವ ವಸತಿ ವಿನ್ಯಾಸ ನಕ್ಷೆಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

2. ಈ ಬಗ್ಗೆ ವಿನ್ಯಾಸದ ಮಾಲೀಕರಿಗೆ ಲಿಖಿತ ಹೇಳಿಕೆ / ಸಮಜಾಯಿಷಿಯನ್ನು ಸಲ್ಲಿಸಲು ಅವಕಾಶ ನೀಡಿ ದಿನಾಂಕ: 01.10.2016, 04.09.2017, 11.10.2017 ರಲ್ಲಿ ಪತ್ರಗಳನ್ನು ಬರೆಯಲಾಗಿದ್ದು, ಸದರಿಯವರು ಇಲ್ಲಿಯವರೆಗೆ ಯಾವುದೇ ರೀತಿಯ ಸೂಕ್ತ ಉತ್ತರ / ಸಮಜಾಯಿಷಿಗಳನ್ನು ಈ ಕಛೇರಿಗೆ ಸಲ್ಲಿಸಿರುವುದಿಲ್ಲ. ತದನಂತರ, ದಿನಾಂಕ: 21.10.2020 ರಂದು ವಿನ್ಯಾಸ ಮಾಲೀಕರಿಗೆ ನೋಟಿಸನ್ನು ಸಹ ನೀಡಲಾಗಿದ್ದು, ಸದರಿಯವರು ನೋಟಿಸ್‌ಗೂ ಸಹ ಯಾವುದೇ ರೀತಿಯ ಉತ್ತರ / ಸಮಜಾಯಿಷಿ ನೀಡಿರುವುದಿಲ್ಲ. ಅಂತಿಮವಾಗಿ, ದಿನಾಂಕ: 25.08.2021 ರಂದು ಪುನಃ ನೋಟಿಸನ್ನು ಈ ಕಛೇರಿಯಿಂದ ನೀಡಲಾಗಿದ್ದು, ಇವ್ಯಗಳಾವುದಕ್ಕೂ ವಿನ್ಯಾಸದ ಮಾಲೀಕರು ಉತ್ತರಿಸಿರುವುದಿಲ್ಲ.

3. ಮುಂದುವರೆದು, ಸದರಿ ವಿನ್ಯಾಸದಲ್ಲಿ ನಿವೇಶನಗಳನ್ನು ಖರೀದಿಸಿರುವ ನಿವೇಶನದ ಮಾಲೀಕರು ಹಾಗೂ ಶ್ರೀ ರಾಜೇಶ್ ಟಿ, ಅಧ್ಯಕ್ಷರು, ಮೆ॥ ಆಲ್ಫಾ ಆರ್ ಜೆ ಬಡಾವಣೆ, ಸೈಟ್ ಓನರ್ಸ್ ಅಸೋಸಿಯೇಷನ್ಸ್ ಇವರ ದೂರು ಪತ್ರ ಸಂಖ್ಯೆ: ALPHA/239/2020/002, ದಿನಾಂಕ: 14.10.2020, 28.12.2020, 15.02.2021 ರ ಪತ್ರಗಳಿಗೆ ಸಂಬಂಧಿಸಿದಂತೆ ಈಗಾಗಲೇ ವಿನ್ಯಾಸದ ಮಾಲೀಕರು /ಅಭಿವೃದ್ಧಿದಾರರಾದಂತಹ ಶ್ರೀ ಹೆಚ್.ಜೆ. ರಮೇಶ್ ಮತ್ತು ಶ್ರೀ ಟಿ. ರಾಜಣ್ಣ ಇವರುಗಳಿಗೆ ಅನೇಕ ಬಾರಿ ಪತ್ರ ಮುಖೇನ ತಿಳಿಸಿದ್ದರೂ ಸಹ ಯಾವುದೇ ಸೂಕ್ತ ಕ್ರಮ ಕೈಗೊಳ್ಳದೇ ಬೇಜವಾಬ್ದಾರಿಯಿಂದ ವರ್ತಿಸಿರುತ್ತಾರೆ. ಅಲ್ಲದೆ, ಹಲವಾರು ಬಾರಿ ಈ ಕಛೇರಿಯಿಂದ ಬರೆದ ಪತ್ರಗಳು ಸಹ ಸ್ವೀಕೃತಿಯಾಗದೇ ಹಿಂದಿರುಗಿರುತ್ತದೆ. ಹಾಗಾಗಿ, ಅಂತಿಮವಾಗಿ ಈ ಕಛೇರಿಯಿಂದ "ಪ್ರಜಾವಾಣಿ" ಮತ್ತು "ವಿಜಯಕರ್ನಾಟಕ" ದಿನಪತ್ರಿಕೆಗಳಲ್ಲಿ ದಿನಾಂಕ: 26.08.2021 ರಂದು ಸಾರ್ವಜನಿಕ ಪತ್ರಿಕಾ ಪ್ರಕಟಣೆ ಮೂಲಕ ನೋಟಿಸ್ ಅನ್ನು ಹೊರಡಿಸಲಾಗಿದ್ದು, ಈ ಕಛೇರಿಗೆ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಅನುಮೋದನೆ ಪಡೆದಿರುವ ಸಂಬಂಧ ವಿನ್ಯಾಸದ ಮಾಲೀಕರು / ಅಭಿವೃದ್ಧಿದಾರರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದೆಂದು ನೋಟಿಸನ್ನು ಸಹ ನೀಡಲಾಗಿತ್ತು.

C. Nagaraj

4. ಮುಂದುವರೆದು, ಶ್ರೀ ಹೆಚ್.ಜಿ. ರಮೇಶ್ ಬಿನ್ ಜಂಗಾರೆಡ್ಡಿ ಇವರ ಮನವಿ ಪತ್ರ ದಿನಾಂಕ: 08.09.2021 ರಲ್ಲಿ ಸದರಿ ವಿನ್ಯಾಸದ ಮಾಲೀಕರುಗಳು ಈ ಕಛೇರಿಗೆ ಮಸಮಿಯನ್ನು ಸಲ್ಲಿಸಿ, ಆರ್ಥಿಕ ಮುಗ್ಗಟ್ಟಿನಿಂದ ವಿನ್ಯಾಸವನ್ನು ಅಭಿವೃದ್ಧಿ ಪಡಿಸಲು ತೊಂದರೆಯಾಗಿದ್ದ ಕಾರಣ ಜಿ.ಆರ್. ಸುಬ್ರಮಣಿ ಬಿನ್ ರಾಮಯ್ಯ ಎಂಬುವವರ ಕಡೆಯಿಂದ ಹಣವನ್ನು ಪಡೆದು ಈ ಲೇಔಟ್‌ನಲ್ಲಿ ಜಿ.ಆರ್. ಸುಬ್ರಮಣಿ ಬಿನ್ ರಾಮಯ್ಯ ಎಂಬುವವರಿಗೆ ಜಮೀನಿನ ಸ್ಯೂರಿಟಿಗೋಸ್ಕರ ಲೇಔಟ್‌ನಲ್ಲಿ ಸ್ವಲ್ಪ ಜಾಗ ಕೊಟ್ಟಿದ್ದು, ಈಗ ಅವರಿಗೆ ಹಣವನ್ನು ಹಿಂತಿರುಗಿಸಿ ಆ ಜಾಗವನ್ನು ಹಿಂಪಡೆದು ನಿವೇಶನದಾರರಿಗೆ ಯಾವುದೇ ತೊಂದರೆ ಬಾರದ ಹಾಗೆ ಮತ್ತು ಅವರ ನಿವೇಶನಗಳಿಗೆ ರಸ್ತೆಗಳು ಅಗೆದಿರುವುದನ್ನು ಸರಿಪಡಿಸಿ ಅವರುಗಳ ನಿವೇಶನಗಳಿಗೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಖುದ್ದು ಬಗೆಹರಿಸಿಕೊಡುವುದಾಗಿ ತಿಳಿಸುತ್ತಾ, 40 ದಿನಗಳ ಕಾಲಾವಕಾಶ ಕಲ್ಪಿಸಿಕೊಡಲು ಕೋರಿರುತ್ತಾರೆ.

5. ಸದರಿಯವರು ಕೋರಲಾಗಿರುವಂತೆ ನಿಗದಿತ ಕಾಲಾವಕಾಶದೊಳಗೆ ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ಈ ಕಛೇರಿಗೆ ಮಾಹಿತಿ ನೀಡುವಂತೆ ಹಾಗೂ ಸದರಿ ವಿನ್ಯಾಸದಲ್ಲಿನ ಉಳಿಕೆ ನಿವೇಶನಗಳನ್ನು ಬಿಡುಗಡೆಗೊಳಿಸಿಕೊಳ್ಳಲು ಶೀಘ್ರವಾಗಿ ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಲು ಕ್ರಮ ವಹಿಸಲು ತಿಳಿಸುತ್ತಾ, ತಪ್ಪಿದಲ್ಲಿ ಈ ಪ್ರಾಧಿಕಾರದ ವತಿಯಿಂದ ವಿನ್ಯಾಸದ ಅಭಿವೃದ್ಧಿದಾರರ / ಮಾಲೀಕರುಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗುವುದು ಎಂದು ಈ ಕಛೇರಿ ಪತ್ರ ದಿನಾಂಕ: 13.09.2021 ರಲ್ಲಿ ತಿಳಿಸಲಾಗಿರುತ್ತದೆ. ಆದರೆ, ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವ ಬಗ್ಗೆ ಈ ಕಛೇರಿಗೆ ಮಾಹಿತಿ ನೀಡಿರುವುದಿಲ್ಲ.

6. ಹಾಗಾಗಿ, ವಿನ್ಯಾಸದ ಅಭಿವೃದ್ಧಿದಾರರು / ಮಾಲೀಕರಿಗೆ ಈಗಾಗಲೇ ಬಹಳಷ್ಟು ಸಮಯಾವಕಾಶವನ್ನು ನೀಡಿದ್ದರೂ ಸಹ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸದೇ ಹಾಗೂ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆಯುವುದಕ್ಕೂ ಮೊದಲೇ ಕೆಲವು ಜಮೀನುಗಳನ್ನು ಮಾರಾಟ ಮಾಡಿ ತಮ್ಮ ಮಾಲೀಕತ್ವದಲ್ಲಿಲ್ಲದ ಜಮೀನುಗಳನ್ನು ಸೇರಿಸಿ ಪ್ರಾಧಿಕಾರಕ್ಕೆ ತಪ್ಪು ಮಾಹಿತಿ ನೀಡಿ ಸತ್ಯವನ್ನು ಮರೆಮಾಚಿ ಪ್ರಾಧಿಕಾರದಿಂದ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದಿರುವ ಹಿನ್ನೆಲೆಯಲ್ಲಿ, ಈಗಾಗಲೇ ಬೇರೆಯವರಿಗೆ ಮಾರಾಟ ಮಾಡಲಾದ ಜಮೀನುಗಳ ಮಾಲೀಕರುಗಳೊಂದಿಗೆ ಸೂಕ್ತ ಕಾನೂನು ರೀತಿಯಲ್ಲಿ ಸದರಿ ಜಮೀನುಗಳಿಗೆ ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಂಡು ಅಥವಾ ತಾವೇ ಸದರಿ ಜಮೀನುಗಳನ್ನು ಖರೀದಿಸಿ, ವಿನ್ಯಾಸವನ್ನು ಸೂಕ್ತವಾಗಿ ಮಾರ್ಪಡಿಸಿ ಅನುಮೋದನೆ ಪಡೆಯಲು ಹಾಗೂ ಸದರಿ ವಿನ್ಯಾಸದಲ್ಲಿ ಈಗಾಗಲೇ ನಿವೇಶನಗಳನ್ನು ಖರೀದಿಸಿದಂತಹ ಗ್ರಾಹಕರಿಗೆ ತೊಂದರೆ ಆಗುವುದನ್ನು ತಪ್ಪಿಸುವ ಸಂಬಂಧ ಶ್ರೀ ಹೆಚ್.ಜಿ. ರಮೇಶ್ ಬಿನ್ ಜಂಗಾರೆಡ್ಡಿ ಹಾಗೂ ಶ್ರೀ ಟಿ. ರಾಜಣ್ಣ ಬಿನ್ ತಮ್ಮಣ್ಣ ಇವರುಗಳ ಮೇಲೆ **ಇಂಡಿಯನ್ ಪೀನಲ್ ಕೋಡ್‌ನ ಅನ್ವಯ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿ ವಿನ್ಯಾಸದಲ್ಲಿನ ನಿವೇಶನಗಳನ್ನು ಖರೀದಿ ಮಾಡಿರುವ ಸಾರ್ವಜನಿಕರ ಹಿತದೃಷ್ಟಿಯಿಂದ ಸೂಕ್ತ ಕ್ರಮ ಕೈಗೊಳ್ಳಲು** ದಿನಾಂಕ: 22.10.2021 ರಲ್ಲಿ ಆರಕ್ಷಕ ವೃತ್ತ ನಿರೀಕ್ಷಕರು, ತಿರುಮಲಶೆಟ್ಟಿಹಳ್ಳಿ ಗ್ರಾಮ, ಅನುಗೊಂಡನಹಳ್ಳಿ ಹೋಬಳಿ ಇವರಿಗೆ ಹಾಗೂ ದಿನಾಂಕ: 30.10.2021 ರಲ್ಲಿ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ಅನುಗೊಂಡನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿರುತ್ತದೆ.

7. ಆದರೆ, ಆಲ್ಫಾ ಆರ್.ಜಿ. ಲೇಔಟ್ ನಿವೇಶನ ಖರೀದಾರರುಗಳ ತಕರಾರು ಪತ್ರ ದಿನಾಂಕ: 26.10.2021 ಮತ್ತು 28.10.2021 ರಲ್ಲಿ ಪ್ರಸ್ತಾಪಿತ ಲೇಔಟಿನಲ್ಲಿ ದೂರುದಾರರುಗಳು ನಿವೇಶನಗಳನ್ನು ಖರೀದಿ ಮಾಡಿದ್ದು, ಸದರಿ ನಿವೇಶನಗಳಿಗೆ ಇ-ಖಾತಾ ಹೊಂದಿದ್ದು, ಕಂದಾಯವನ್ನು ಸಹ ಕಟ್ಟಿರುವುದಾಗಿ ತಿಳಿಸುತ್ತಾ, ಈ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಬ್ಯಾಂಕಿನಿಂದ ಸಹ ಸಾಲವನ್ನು ಪಡೆದಿರುವುದಾಗಿ ಹಾಗೂ ಸದರಿ ಲೇಔಟಿನ ನಿವೇಶನಗಳ ಸಮಸ್ಯೆಗಳನ್ನು ಬಗೆಹರಿಸಿ ಕೊಡುವುದರೊಂದಿಗೆ ವಿನ್ಯಾಸದ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಹಾಗೂ ದೂರು ಮನವಿಗಳಿಗೆ ಸ್ಪಂಧಿಸಿ ನ್ಯಾಯ ಒದಗಿಸಿಕೊಡಬೇಕೆಂದು ಕೋರಿರುತ್ತಾರೆ.

8. ಹಾಗಾಗಿ, ಮುಂದಿನ ದಿನಗಳಲ್ಲಿ ನಿವೇಶನಗಳನ್ನು ಖರೀದಿಸುವಂತಹ ಸಾರ್ವಜನಿಕರುಗಳಿಗೆ ತೊಂದರೆ ಉಂಟಾಗುವುದನ್ನು ತಪ್ಪಿಸಲು ಹಾಗೂ ಈ ಪ್ರಾಧಿಕಾರಕ್ಕೆ ಸತ್ಯವನ್ನು ಮರೆಮಾಚಿ ಸುಳ್ಳು ದಾಖಲೆಗಳನ್ನು ಸಲ್ಲಿಸಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದಿರುವುದರಿಂದ ಈ ಪ್ರಾಧಿಕಾರದಿಂದ ದಿನಾಂಕ: 23.07.2012 ರಂದು ನೀಡಲಾಗಿರುವ ವಸತಿ ವಿನ್ಯಾಸ ನಕ್ಷೆ ಅನುಮೋದನೆಯನ್ನು **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 76(ಓ) ರ ಅಡಿಯಲ್ಲಿ ತಾತ್ಕಾಲಿಕವಾಗಿ ವಜಾ ಮಾಡಲು** ವಿಷಯವನ್ನು ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

ನಿರ್ಣಯ: ಟಿಪ್ಪಣಿಯಲ್ಲಿನ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ವಿನ್ಯಾಸದ ಅಭಿವೃದ್ಧಿದಾರರು ಈ ಪ್ರಾಧಿಕಾರದಿಂದ ಹಲವಾರು ಅವಕಾಶಗಳನ್ನು ನೀಡಿ ಬರೆಯಲಾದ ಪತ್ರಗಳಿಗಾಗಲೀ ಅಥವಾ ಈ ಕಛೇರಿಯಿಂದ ನೀಡಲಾಗಿರುವ ನೋಟಿಸಿಗಾಗಲೀ ಯಾವುದೇ ರೀತಿಯ ಸಮಜಾಯಿಷಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ಅಲ್ಲದೆ, ವಿನ್ಯಾಸದ ಮಾಲೀಕರು ಸುಳ್ಳು ದಾಖಲಾತಿಗಳನ್ನು ಸಲ್ಲಿಸಿ ಸತ್ಯವನ್ನು ಮರೆಮಾಚಿ ಪ್ರಾಧಿಕಾರದಿಂದ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆಯಲಾಗಿರುವುದರಿಂದ ಹಾಗೂ ವಿನ್ಯಾಸದ ಅಭಿವೃದ್ಧಿದಾರರು ಸುಳ್ಳು ಮಾಹಿತಿ ನೀಡಿ ನಿವೇಶನಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವುದನ್ನು ತಪ್ಪಿಸುವ ಉದ್ದೇಶದಿಂದ ವಿನ್ಯಾಸದ ಮಾಲೀಕರು ಎಲ್ಲಾ ದಾಖಲೆಗಳನ್ನು ಸರಿಪಡಿಸಿಕೊಂಡು ಅಂತಿಮ ಅನುಮೋದನೆ / ಉಳಿಕೆ ನಿವೇಶನಗಳನ್ನು ಬಿಡುಗಡೆಗೆ ಕೋರುವ ವರೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 76(ಓ) ರ ಅಡಿಯಲ್ಲಿ ಸದರಿ ವಸತಿ ವಿನ್ಯಾಸಕ್ಕೆ ನೀಡಿರುವ ಅನುಮೋದನೆಯನ್ನು ತಾತ್ಕಾಲಿಕವಾಗಿ ರದ್ದುಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ: 16 ಇತರೆ ವಿಷಯಗಳು ಅಧ್ಯಕ್ಷರ ಅಪ್ಪಣೆ ಮೇರೆಗೆ.

ವಿಷಯ: 16/1 ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಬೊಮ್ಮೇನಹಳ್ಳಿ ಗ್ರಾಮದ ಸ.ನಂ. 92/1 ರಲ್ಲಿನ 01 ಎಕರೆ 14 ಗುಂಟೆ, ಸ.ನಂ. 92/2 ರಲ್ಲಿನ 02 ಎಕರೆ, ಸ.ನಂ. 93/1 ರಲ್ಲಿನ 01 ಎಕರೆ 01 ಗುಂಟೆ, ಸ.ನಂ. 93/2 ರಲ್ಲಿನ 01 ಎಕರೆ 06 3/4 ಗುಂಟೆ, ಸ.ನಂ. 93/3 ರಲ್ಲಿನ 02 ಎಕರೆ 02 3/4 ಗುಂಟೆ, ಸ.ನಂ. 93/4 ರಲ್ಲಿನ 39 ಗುಂಟೆ, ಸ.ನಂ. 93/5 ರಲ್ಲಿನ 01 ಎಕರೆ 05 ಗುಂಟೆ ಸ.ನಂ. 116/1 ರಲ್ಲಿನ 02 ಎಕರೆ 04 ಗುಂಟೆ, ಸ.ನಂ. 116/2 ರಲ್ಲಿನ 01 ಎಕರೆ 35 ಗುಂಟೆ, ಸ.ನಂ. 116/3 ರಲ್ಲಿನ 01 ಎಕರೆ 05 ಗುಂಟೆ, ಸ.ನಂ. 117 ರಲ್ಲಿನ 05 ಎಕರೆ 01 ಗುಂಟೆ, ಸ.ನಂ. 119/1 ರ ಪೈಕಿ 16 ಗುಂಟೆ, ಸ.ನಂ. 119/2 ರಲ್ಲಿನ 01 ಎಕರೆ 39 ಗುಂಟೆ, ಸ.ನಂ. 127/1 ರಲ್ಲಿನ 01 ಎಕರೆ 22 ಗುಂಟೆ, ಸ.ನಂ. 127/2 ರಲ್ಲಿನ 01 ಎಕರೆ 02 1/2 ಗುಂಟೆ, ಸ.ನಂ. 127/3 ರಲ್ಲಿನ 30 ಗುಂಟೆ, ಸ.ನಂ. 127/4 ರಲ್ಲಿನ 29 3/4 ಗುಂಟೆ ಒಟ್ಟು 26 ಎಕರೆ 12 3/4 ಗುಂಟೆ (00-26 1/4 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಪರಿಗಣಿಸಲಾಗಿರುವ

C. Nayaj

ಜಮೀನುಗಳಿಗೆ ಸ.ನಂ. 127/3 ರಲ್ಲಿನ 01 ಗುಂಟೆ ವಿಸ್ತೀರ್ಣವನ್ನು ಸೇರಿಸಿ ಒಟ್ಟಾರೆ 26 ಎಕರೆ 13 3/4 ಗುಂಟೆ (00–26 1/4 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ.

ಅರ್ಜಿದಾರರು: ಶ್ರೀ ವಿ. ವೆಂಕಟ ಕೃಷ್ಣಾರೆಡ್ಡಿ ಮತ್ತು ಇತರರು, ಮೆ। ವಾರ್ಸ್ & ಕೇನ್ಸ್ ಡೆವಲಪರ್ಸ್

ಟಿಪ್ಪಣಿ:

1. ಈ ಹಿಂದೆ ದಿನಾಂಕ: 24.09.2021 ರಂದು ನಡೆದ ಪ್ರಾಧಿಕಾರದ 88 ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 15 ರಲ್ಲಿ ವಿಷಯವನ್ನು ಮಂಡಿಸಲಾಗಿದ್ದು, ಪ್ರಸ್ತಾಪಿತ ಬೊಮ್ಮೇನಹಳ್ಳಿ ಗ್ರಾಮದ ವಿವಿಧ ಸ.ನಂ. ಗಳಲ್ಲಿನ ಒಟ್ಟು 26 ಎಕರೆ 12 3/4 ಗುಂಟೆ (00–26 1/4 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಪರಿಗಣಿಸಲಾಗಿತ್ತು.

   ಆದರೆ, ಅರ್ಜಿದಾರರು ದಿನಾಂಕ: 16.12.2021 ರಂದು ಮನವಿ ಪತ್ರವನ್ನು ಸಲ್ಲಿಸಿ, ಬೊಮ್ಮೇನಹಳ್ಳಿ ಗ್ರಾಮದ ಸ.ನಂ. 127/3 ರಲ್ಲಿನ 01 ಗುಂಟೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಬಿಡಿಎಸ್/ಎ.ಎಲ್.ಎಸ್.(ಇ)ವಿಬಿ ಎಸ್.ಆರ್/ 11/2004–05, ದಿನಾಂಕ: 30.06.2004 ರಲ್ಲಿ ಹೊರಡಿಸಿರುವ ಅಧಿಕೃತ ಜ್ಞಾಪನ ಪತ್ರದಲ್ಲಿನ ಷರತ್ತುಗಳಿಗೊಳಪಟ್ಟು, ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎ.ಎಲ್.ಎಸ್.(ಇ) (ವಿಬಿ) ಎಸ್.ಆರ್/11/2004–05, ದಿನಾಂಕ: 24.11.2021 ರಲ್ಲಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶಿಸಿರುತ್ತಾರೆ. ಅರ್ಜಿದಾರರು ಸದರಿ 01 ಗುಂಟೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದ ಅಗತ್ಯವಾದ ಎಲ್ಲಾ ದಾಖಲಾತಿಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಹಾಗಾಗಿ, ಸ.ನಂ. 127/3 ರಲ್ಲಿನ 01 ಗುಂಟೆ ಜಮೀನನ್ನು ಸೇರಿಸಿಕೊಂಡು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುವುದನ್ನು ಒಪ್ಪಬಹುದಾಗಿದ್ದು, ಒಟ್ಟಾರೆಯಾಗಿ 26 ಎಕರೆ 13 3/4 ಗುಂಟೆ (00–26 1/4 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ವಿಷಯವನ್ನು ಸಭೆಯ ಚರ್ಚೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ.

ನಿರ್ಣಯ:

ಟಿಪ್ಪಣಿಯಲ್ಲಿನ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ದಿನಾಂಕ: 24.09.2021 ರಂದು ನಡೆದ ಪ್ರಾಧಿಕಾರದ 88 ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 15 ರಲ್ಲಿ ನಿರ್ಣಯದಂತೆ ಒಟ್ಟು 26 ಎಕರೆ 12 3/4 ಗುಂಟೆ (00–26 1/4 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಿಗೆ ಸ.ನಂ. 127/3 ರಲ್ಲಿನ 01 ಗುಂಟೆ ಜಮೀನನ್ನು ಸೇರಿಸಿಕೊಂಡು ಒಟ್ಟಾರೆಯಾಗಿ 26 ಎಕರೆ 13 3/4 ಗುಂಟೆ (00–26 1/4 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ,
ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

C. Nayaki

ಅಧ್ಯಕ್ಷರು,
ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.